## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.


# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ಸರ್ವಧಾರಿ ಸಂ|| ಮಾಘ ಮಾಸ ಸಂಪುಟ - ೨೪

ಫೆಬ್ರವರಿ ೨೦೦೯ ಸಂಚಿಕೆ - ೦೨


# Study in similarities

Even a cursory study of the lives of any of the worlds greatest human beings in the spiritual realm reveals striking similarities. Beginning from the circumstances of their birth, their education, their predisposition, the social milieu of their times to their recognition as truly "special" beings, the lives of these realised souls presents a study in similarities.

The lives of two of the twentieth century's greatest savants would be a case in point. Bhagawan Ramana Maharshi and Sadguru Chandrashekara Bharati of the Sringeri Sharada Peetam are two great sages who changed and continue to change the course of lives of thousands . If Venkatraman (the original name of Ramana Maharshi) was born in an enlightened family, Narasimha Shastry (Chandrashekara Bharati) was born into a family of vedic scholars. Venkatraman underwent a terrifying "death" experience, after which all his faculties turned inwards, creating in him an intense awareness of the "I", as separate from the body. Narasimha was given to solitude and quiet contemplation in a place far removed from the madding crowds. Both were endowed with a sharp intellect which could grasp the intricacies of the scriptural texts and expound them in a simple manner to devotees. If

Venkatraman's greatness was recognised by a renowned scholar Kavyakantha Ganapati Shastry who called him "Bhagawan", Narasimha's potential was spotted very early by his preceptor Narasimha Bharati, who later anointed him as his successor and who was then named Chandrashekara Bharati.

Both stressed upon the importance of the study of the self or Atma Vichara, to understand the true nature of the self. They emphasised the vedantic truth that the self is different from the body in all their teachings which is exemplified in incidents in their lives. When Ramana was diagnosed with a bone tumour and was advised amputation to stop the spread of the malignancy, he refused saying "why mutilate this body which anyway is going to dust. Let nature take its course". Suffering from a raging fever while on a tour, Chandrashekara Bharati was advised against a cold bath, to which he retorted "for whom should I preserve this body which is bound to collapse any time?"

When people pressed Ramana to take treatment, he asked them not to mistake the body for the Guru and said he would always be available to the true seeker. Chandrashekara Bharati in a letter to a devotee says"though I may not be present in body, I shall always be present to guide the earnest". The ineffable tranquillity that was experienced in their presence and the silent guidance being received even today stand testimony to their everlasting luminosity.







# ಅಧ್ಯಕ್ಷ ನುಡಿ

ಸಂಕೇತಿ ಬಾಂಧವರೆಲ್ಲ ಸಂತಸಪಡುವ ಸುದ್ದಿಯಿಂದ ಈ ಸಂಚಿಕೆಯ ಆರಂಭ. ಹಿರಿಯ ವಿದ್ವಾಂಸರೂ ಜನಪ್ರಿಯ ವಾಗ್ಮಿಗಳೂ, ವಿನಯಶೀಲರೂ ಆದ ಡಾ|| ಮತ್ತೂರು ಕೃಷ್ಣಮೂರ್ತಿಯವರಿಗೆ ''ಪದ್ಮಶ್ರೀ'' ಪ್ರಶಸ್ತಿ ಪ್ರದಾನವಾಗಿರುವುದು ನಮ್ಮೆಲ್ಲರಿಗೂ ಅತ್ಯಂತ ಹೆಮ್ಮೆಯನ್ನೂ , ಸಂತೋಷವನ್ನೂ ತಂದಿದೆ. ನಮ್ಮ ಬಾಂಧವ ಸಮೂಹದಲ್ಲೇ ಈ ಪ್ರಶಸ್ತಿ ಬಂದಿರುವುದು ಮೊದಲ ಬಾರಿಗೆ. ಶ್ರೀಯುತರಿಗೆ ಹಾರ್ದಿಕ, ಗೌರವಪೂರ್ಣ ಅಭಿನಂದನೆಗಳು.

ವೃದ್ಧಾಶ್ರಮದ ನಿರ್ಮಾಣದ ಪ್ರಗತಿ ಉತ್ತಮ ಗತಿಯಲ್ಲಿ ಆಗುತ್ತಿದ್ದು ಈ ಬಾರಿ ಸಹೃದಯರಿಂದ ಸಾಕಷ್ಟು ಕೊಡುಗೆಗಳು ಬಂದಿವೆ. ದಿ|| ಬಿ.ವಿ.ಎಸ್. ರಾವ್ ಅವರ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ಅವರ ಪುತ್ರರಾದ ಶ್ರೀ ಬಿ.ಎಸ್.ಚಂದ್ರಶೇಖರ ರಾವ್ ಅವರು ವೃದ್ಧಾಶ್ರಮಕ್ಕಾಗಿ ರೂ. 1 ಲಕ್ಷದ ಕೊಡುಗೆ ನೀಡಿದ್ದಾರೆ.

ಬಿ.ವಿ.ಎಸ್.ರಾವ್ ಅವರ ಸಹೋದರರಾದ ಶ್ರೀ ಬಿ.ವಿ.ಆರ್. ರಾವ್ ಅವರ ಮಗ ಶ್ರೀ ದ್ವಾರಕಾನಾಥ್ ಅವರು ಅಕಾಲ ಮರಣಕ್ಕೆ ತುತ್ತಾದ ಅವರ ಮಗ ಚಿ|| ನಿಖಿಲ್ ಅವರ ಹೆಸರಿನಲ್ಲಿ ರೂ. 1.2 ಲಕ್ಷದ ದೇಣಿಗೆಯನ್ನು ಸಂಘಕ್ಕೆ ನೀಡಿದ್ದಾರೆ. ಬರುವ ಬಡ್ಡಿಯಲ್ಲಿ ವಿದ್ಯಾರ್ಥಿಗೆ ಅದರಲ್ಲೂ ಬಿ.ಬಿ.ಎಂ. ಓದುವ ಅರ್ಹ ಸಂಕೇತಿ ವಿದ್ಯಾರ್ಥಿಗೆ ಸಹಾಯ ಮಾಡಿ ಎಂದು ತಿಳಿಸಿದ್ದಾರೆ. ಸದ್ಯದಲ್ಲಿಯೇ ವೃದ್ಧಾಶ್ರಮಕ್ಕೂ ಕೊಡುಗೆ ನೀಡುವ ಇಂಗಿತ ವ್ಯಕ್ತಪಡಿಸಿದ್ದಾರೆ.

ನಿಮಗೆಲ್ಲ ತಿಳಿದಿರುವಂತೆ ವೃದ್ಧಾಶ್ರಮದ ಮೊದಲ ಅಂತಸ್ತು ಬಹುತೇಕ ನಿರ್ಮಾಣವಾಗಿದೆ. ಸಂಘವೇ ಎರಡನೇ ಅಂತಸ್ತನ್ನು ನಿರ್ಮಿಸಿ ಪ್ರಾರ್ಥನಾ

ಮಂದಿರವನ್ನು ವಿನ್ಯಾಸಗೊಳಿಸಬೇಕೆಂದು ಯೋಚಿಸುತ್ತಿದ್ದಾಗಲೇ ಆತ್ಮೀಯ ಬಾಂಧವರೂ, ಅಮೆರಿಕಾದಲ್ಲಿ ವಾಸ್ತವ್ಯ ಹೂಡಿಯೂ ಸಂಘದ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿರುವವರೂ ಆದ ಶ್ರೀ ಜಗನ್ನಾಥ್ ಹಾಗೂ ಅವರ ಪತ್ನಿ ಶ್ರೀಮತಿ ಲೀಲಾ ಜಗನ್ನಾಥ್ ಅವರುಗಳು 5 ಲಕ್ಷ ರೂ.ಗಳ ಬೃಹತ್ ಕೊಡುಗೆ ನೀಡಿ ಪ್ರಾರ್ಥನಾ ಮಂದಿರವು ಸುಲಭವಾಗಿ ನಿರ್ಮಾಣವಾಗಲು ಅನುವು ಮಾಡಿಕೊಟ್ಟಿದ್ದಾರೆ.

ಬೆಂಗಳೂರು ಟೆಲಿಕಾಂನ ಮಾಜಿ ಮುಖ್ಯಸ್ಥರಾದ ಶ್ರೀ ಆರ್. ಶ್ರೀನಿವಾಸನ್ ಅವರು ವೃದ್ಧಾಶ್ರಮಕ್ಕಾಗಿ ರೂ. 10,000/- ಕೊಡುಗೆ ನೀಡಿದ್ದಾರೆ.

ಈ ಎಲ್ಲ ಆದರಣೀಯ ದಾನಿಗಳಿಗೆ ಸಂಘವು ಚಿರಋಣಿಯಾಗಿದೆ.

ಶ್ರೀ ತ್ಯಾಗರಾಜ-ಶ್ರೀ ಪುರಂದರದಾಸ ಆರಾಧನಾ ಮಹೋತ್ಸವವು ಈ ತಿಂಗಳ ಆದಿಯಲ್ಲಿ ಸ್ಮರಣೀಯವಾಗಿ ನಡೆದಿದೆ. ವಿವರಗಳನ್ನು ಈ ಸಂಚಿಕೆಯಲ್ಲಿಯೇ ನೀಡಲಾಗಿದೆ.

ಮಹಾ ಶಿವರಾತ್ರಿಯ ಶುಭಾಶಯಗಳೊಂದಿಗೆ,

- ಎಂ. ನರಸಿಂಹನ್

## ಬದಲಾದ ವಿಳಾಸಗಳ ಪಟ್ಟಿ ಲಭ್ಯ

**15.12.2008** ರವರೆಗೆ ಪರಿಷ್ಕರಿಸಿದ ಬದಲಾದ ವಿಳಾಸ ಪಟ್ಟಿ ಮುದ್ರಿಕೆಯಾಗಿ ಲಭ್ಯವಾಗಿರುತ್ತದೆ. ಇದನ್ನು ಮೈಸೂರು ಕಛೇರಿ ಮತ್ತು ಬೆಂಗಳೂರು ಕಛೇರಿಗಳಲ್ಲಿ ಪಡೆಯಬಹುದು. ಇದರ ಬೆಲೆ ರೂ. 15/- ಮಾತ್ರ. ಇಡೀ ಪುಸ್ತಕದ ಬೆಲೆ ರೂ. 50/- ಮಾತ್ರ.







# ಕಾರ್ಯದರ್ಶಿ ಕಾಲಂ

ಸಹೃದಯ ಸಂಕೇತಿ ಬಂಧುಗಳೆ, ನಮ್ಮ ಹಿರಿಯರ ಋಷಿಮುನಿಗಳ, ಸದ್ಗುರುಗಳ ಆರಾಧನಾ ಮಹೋತ್ಸವವನ್ನು ಮಾಡುವುದು, ನಮ್ಮಲ್ಲಿ ನೂರಾರು ವರ್ಷಗಳಿಂದ ಬಂದಿರುವ ಒಂದು ಸತ್ಸಂಪ್ರದಾಯ. ಅವರುಗಳ ಪುಣ್ಯ ತಿಥಿಯ ಅಂಗವಾಗಿ ಕಾರ್ಯಕ್ರಮಗಳನ್ನು ಆಯೋಜಿಸಿ, ನಡೆಸುವುದು ಸುಸಂಸ್ಕೃತಿಯೂ ಹೌದು.

ಈ ದಿಶೆಯಲ್ಲಿಯೇ, ದಿನಾಂಕ 01.02.2009ರಂದು ನಮ್ಮ ಬೆಂಗಳೂರು ಶಾಖೆಯ ವತಿಯಿಂದ ಶ್ರೀ ಸದ್ಗುರು ಶ್ರೀ ಪುರಂದರ ದಾಸರು ಮತ್ತು ಸದ್ಗುರು ಶ್ರೀ ತ್ಯಾಗರಾಜರ ಸ್ವಾಮಿಗಳ ಆರಾಧನಾ ಮಹೋತ್ಸವವನ್ನು ವಿದ್ವಾನ್ ಶ್ರೀ ಆರ್. ಕೆ. ಪದ್ಮನಾಭರವರು ನಡೆಸಿಕೊಟ್ಟಿರುತ್ತಾರೆ. ಭಗವಂತನ ಸಾಕ್ಷಾತ್ಕಾರವನ್ನೇ ಪಡೆದಿದ್ದ ಇಂತಹ ಮಹನೀಯರ ಆರಾಧನೆಯಲ್ಲಿ ಪಾಲ್ಗೊಳ್ಳುವುದು ಒಂದು ಅತ್ಯಂತ ಪುಣ್ಯ ಕಾರ್ಯ. ಅದರಲ್ಲೂ ಶ್ರೀ ತ್ಯಾಗರಾಜರ ಪಂಚರತ್ನ ಕೀರ್ತನೆಗಳ ಶ್ರವಣ, ಗಾಯನ ನಮಗೂ ಮುಕ್ತಿದಾಯಕವೆಂಬುದರಲ್ಲಿ ಎರಡು ಮಾತಿಲ್ಲ. ಈ ಪಂಚರತ್ನ ಕೀರ್ತನೆಗಳನ್ನು ಹಾಡಿದಾಗ ಶ್ರೀ ತ್ಯಾಗರಾಜಸ್ವಾಮಿಗಳಿಗೆ ಶ್ರೀ ರಾಮನೇ ಪ್ರತ್ಯಕ್ಷವಾಗಿದ್ದನೆಂಬ ಪ್ರತೀತಿ ಇದೆ. ಭೌತಿಕವಾಗಿ ಶ್ರೀ ರಾಮ ಪ್ರತ್ಯಕ್ಷನಾಗಿದ್ದನೋ ಇಲ್ಲವೋ, ಆದರೆ ಈ ಕೀರ್ತನೆಗಳನ್ನು ನಾವು ಕೇಳಿದಾಗ ನಮಗೂ ಅಂತಹ ಆನಂದದ ಅನುಭವವಾಗುವುದರಲ್ಲಿ ಸಂದೇಹವೇ ಇಲ್ಲ. ಇಂತಹ ಕಾರ್ಯಕ್ರಮವನ್ನು ನಮಗೆ ಕೊಡುತ್ತಿರುವಂಥಾ ಬೆಂಗಳೂರು ಶಾಖೆಗೆ ನಮ್ಮೆಲ್ಲರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು. ಆದರೆ ಒಂದು

ವಿಷಾದದ ಸಂಗತಿ ಎಂದರೆ, ಇಂತಹ ಒಂದು ಇದಕ್ಕೆ ಸೌಖ್ಯ ಪರಕ್ಕೆ ಮೋಕ್ಷ ಎಂಬಂತಹ ಒಂದು ಕಾರ್ಯಕ್ರಮವನ್ನು ಕೊಟ್ಟಾಗಲೂ ನಮ್ಮವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುದಿಲ್ಲವಲ್ಲಾ. ಈ ಕೊರಗು ಈ ಕಾರ್ಯಕ್ರಮದ ಆಯೋಜಕರಿಗೆ ನಿರಂತರವಾಗಿ ಇದ್ದೇ ಇದೆ. ನಮ್ಮವರೇ ಆದ ಹಿರಿಯ ವಿದ್ವನ್ಮಣಿಗಳು ನಡೆಸಿಕೊಡುವ ಈ ಕಾರ್ಯಕ್ರಮದಲ್ಲಿ ಬೆಂಗಳೂರು ನಗರದ ಇಡೀ ಸಂಕೇತಿ ಸಮಾಜವೇ ಭಾಗವಹಿಸಬೇಕೆಂಬುದು ನಮ್ಮೆಲ್ಲರ ಆಸೆ. ನಮ್ಮವರ ಮೇಲೆ ಅಭಿಮಾನ ಬೆಳೆಸಿಕೊಳ್ಳಿ. ಸಂಘದ ಮೇಲೆ ಪ್ರೀತಿ, ಅಭಿಮಾನವನ್ನು ಬೆಳೆಸಿಕೊಳ್ಳಿ. ನಮ್ಮ ಸಮಾಜವನ್ನು ಒಟ್ಟಾಗಿರಿಸಲು ಕಷ್ಟಪಡುತ್ತಿರುವ ಸಂಘದ ಜತೆ ಕೈಜೋಡಿಸಿ. ಇದು ನಮ್ಮ ನಿಮ್ಮೆಲ್ಲರ ಸಂಘ. ಯಾರೊಬ್ಬರ ಸ್ವತ್ತೂ ಅಲ್ಲ. ''ಯಾರೊ ಜನ ಸಮಿತಿ ಸದಸ್ಯರು ನಡೆಸಿಕೊಳ್ಳುತ್ತಾರೆ, ನಮಗೇನು'' ಅನ್ನೊ ಭಾವನೆಯನ್ನು ಬೆಳೆಸಿಕೊಳ್ಳಬೇಡಿ. ನಿಮ್ಮ ನಿಮ್ಮ ಮನೆಯಲ್ಲಿರುವ, ಹಿರಿ ಕಿರಿಯ ಮಕ್ಕಳೆಲ್ಲರಿಗೂ ಸಂಘದ ಕಾರ್ಯಕ್ರಮಗಳಲ್ಲಿ ಆಸಕ್ತಿ ಬರುವಂತೆ ಮಾಡಿ. ಸಂಘದ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಿ. ಇದು ಖಂಡಿತಾ ಕೇವಲ ಸಮಿತಿ ಸದಸ್ಯರ ಸಂಘವಲ್ಲ. ಸಮಿತಿ ಸದಸ್ಯರು ಕೇವಲ ನಿಮ್ಮಿಂದ ನಿಯಮಿಸಲ್ಪಟ್ಟ ಸಂಘದ ಕಾವಲುಗಾರರು. ಚುನಾವಣೆಯಲ್ಲಿ ಸ್ಪರ್ಧಿಸಿದರೆ ನೀವು ಯಾರು ಬೇಕಾದರೂ ಸಮಿತಿಗೆ ಆಯ್ಕೆಯಾಗಬಹುದು. ಆದ್ದರಿಂದ ಇಂದೇ ಒಂದು ನಿರ್ಧಾರಕ್ಕೆ ಬನ್ನಿ, ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಿ.

ಸಂಘಕ್ಕೆ ನಿಮ್ಮ ತನು, ಮನ, ಧನ ಸಹಕಾರ ನೀಡಿ.

– ಎಸ್. ಸಿ. ಮಂಜುನಾಥ್





## ವಧು ಬೇಕಾಗಿದೆ

## ವರನ ವಿವರ

| | | |
|---|---|---|
| ಗೋತ್ರ | : | ಆತ್ರೇಯ |
| ವಯಸ್ಸು | : | 27 ವರ್ಷ |
| ವಿದ್ಯಾರ್ಹತೆ | : | B.E. (Mech), M.B.A. (Marketing) |
| ಉದ್ಯೋಗ | : | Manager, Tata Motors, Bangalore |
| ನಿರೀಕ್ಷೆ | : | B.E./CA/MBA/MCA/M.Sc./MBBS ಉದ್ಯೋಗಸ್ಥೆ ಆಗಿದ್ದರೆ ಉತ್ತಮ |
| ಸಂಪರ್ಕಿಸಿ | : | ಕೆ. ಶ್ರೀವತ್ಸನ್, ದೂರವಾಣಿ: **9449027429, 9845310681** |

## ಪುಸ್ತಕ ಬಿಡುಗಡೆ

ನಮ್ಮವರೇ ಆಗಿರುವ ಶ್ರೀ ಆರ್. ಕೆ. ಶ್ರೀಕಂಠ ಕುಮಾರ ಸ್ವಾಮಿಯವರು ''ಸಂಸ್ಕಾರಗಳು ಹಾಗೂ ಮಾನವೀಯ ಮೌಲ್ಯಗಳು'' ಎಂಬ ಪುಸ್ತಕವನ್ನು ಬರೆದಿದ್ದಾರೆ. ಇದರ ಬಿಡುಗಡೆ ಸಮಾರಂಭ ತಾ॥ 31.01.2009ರಂದು ಬೆಂಗಳೂರಿನ ತ್ಯಾಗರಾಜನಗರದಲ್ಲಿರುವ ದತ್ತಾತ್ರೇಯ ದೇವಸ್ಥಾನದಲ್ಲಿ ನಡೆಯಿತು. ಶ್ರೀ ಅನಂತಕೃಷ್ಣ ಘನಪಾಠಿಗಳು ಪುಸ್ತಕ ಬಿಡುಗಡೆ ಮಾಡಿದರು. ಪುಸ್ತಕದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದವರು ಶ್ರೀ ಕೆ. ಜಿ. ಸುಬ್ಬರಾಯ ಶರ್ಮಾರು. ಪುಸ್ತಕ ಪ್ರಕಟಿಸಿದವರು ಆಪಸ್ತಂಬ ಪ್ರಕಾಶನದವರು. ಬೆಲೆ ರೂ. 250/-

## ಶುಭ ಸಮಾಚಾರಗಳು

### ವಿವಾಹ ಮಹೋತ್ಸವ :

| ತಾರೀಖು | ವರ | ವಧು |
|---|---|---|
| 29.01.09 ಬೆಂಗಳೂರು | **ಚಿ|| ರಾ|| ಸತ್ಯಕುಮಾರ್. ಎಸ್.** (ಶ್ರೀಮತಿ ಪ್ರಸನ್ನಲಕ್ಷ್ಮೀ ಮತ್ತು ದಿ|| ಹೆಚ್.ಎನ್.ಸುರೇಶ್ ಅವರ ಪುತ್ರ) | **ಹ||ಕುಂ||ಶೋ|| ಹೆಚ್.ಪಿ.ಸುಷ್ಮ** (ಶ್ರೀಮತಿ ಮಾಲಿನಿ ಮತ್ತು ಶ್ರೀ ಹೆಚ್.ಎನ್.ಪ್ರಭಾಕರ್ ಅವರ ಪುತ್ರಿ) |
| 05.02.09 ಬೆಂಗಳೂರು | **ಚಿ|| ರಾ|| ಶ್ರೀಹರ್ಷ** (ಶ್ರೀಮತಿ ಮಂಜುಳಾಂಬ ಮತ್ತು ಶ್ರೀ ಆರ್. ಕೆ. ಸೋಮಶೇಖರ್ ಅವರ ಪುತ್ರ) | **ಹ||ಕುಂ||ಶೋ|| ರಮ್ಯಲಾವಣ್ಯ** (ಶ್ರೀಮತಿ ಪದ್ಮ ಮತ್ತು ಶ್ರೀ ಬಿ.ಎಸ್.ಪಾಂಡುರಂಗ (ಚೆನ್ನೈ) ಅವರ ಪುತ್ರಿ ಹಾಗೂ ದಿ|| ಶ್ರೀಮತಿ ಸೀತಮ್ಮ ಮತ್ತು ದಿ|| ಬಿ.ಎಸ್.ಮೂರ್ತಿ ಅವರ ಮೊಮ್ಮಗಳು) |
| 05.02.09 ಬೆಂಗಳೂರು | **ಚಿ||ರಾ|| ಸಂಕಾಶ್ ವೆಂಕಟೇಶ್** (ಶ್ರೀಮತಿ ಕಮಲ ಮತ್ತು ಶ್ರೀ ಬಿ. ವಿ. ವೆಂಕಟೇಶಮೂರ್ತಿ ಅವರ ಪುತ್ರ) | **ಹ||ಕುಂ||ಶೋ||ಪೂರ್ಣಿಮಾ ಸಾಲಿಗ್ರಾಂ** (ಶ್ರೀಮತಿ ಯಶೋದ ಮತ್ತು ಶ್ರೀ ಎಂ. ವಿ. ಪ್ರಭಾಕರ್, ಮುಂಬಯಿ ಅವರ ಪುತ್ರಿ) |
| 08.02.09 ಬೆಂಗಳೂರು | **ಚಿ|| ರಾ|| ಲೋಕೇಶ್** (ಶ್ರೀಮತಿ ಪ್ರೇಮ ಮತ್ತು ಶ್ರೀ ಬಿ.ಎಸ್.ವೆಂಕಟರಾಮು ಅವರ ಪುತ್ರ) | **ಹ||ಕುಂ||ಶೋ|| ರಮ್ಯಶ್ರೀ. ಎಸ್.** (ಶ್ರೀಮತಿ ಗೀತಾ ಮತ್ತು ದಿ|| ಸುಬ್ಬರಾಮು ಅವರ ಪುತ್ರಿ) |

### ಜನವರಿ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100/-)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಬಿ. ಕೆ. ಹರೀಶ್ | ಬೆಂಗಳೂರು | 9181 | 2050 |
| ಜಯಲಕ್ಷ್ಮೀ | ಬೆಂಗಳೂರು | 9182 | 2051 |





### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ.ಎನ್.ವಿ. ಸುಬ್ರಹ್ಮಣ್ಯ | ಬೆಂಗಳೂರು | 9172 | 200.00 |
| | (ಮೃತ್ಯುಂಜಯ ಹೋಮ - 01.01.09) | | |
| ಹೆಚ್. ಎಸ್. ಕೃಷ್ಣಮೂರ್ತಿ | ಬೆಂಗಳೂರು | 9177 | 201.00 |
| | (ಮಗಳ ಮದುವೆ - 25.12.08) | | |
| ಉಷಾ ಗುರುನಾಥ್ | ಬೆಂಗಳೂರು | 9179 | 200.00 |
| | (ತಂದೆಯ 80ನೆಯ ಹುಟ್ಟುಹಬ್ಬ) | | |
| ಪ್ರಸನ್ನಲಕ್ಷ್ಮೀ ಸುರೇಶ್ | ಬೆಂಗಳೂರು | 9192 | 500.00 |
| | (ಮಗನ ಮದುವೆ) | | |

### ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| **Adithya Associates** | ಬೆಂಗಳೂರು | 9183 | 600.00 |
| **Ramjay Oxford Book Stores** | ಬೆಂಗಳೂರು | 9185 | 2,500.00 |
| **Indelcon** | ಬೆಂಗಳೂರು | 9200 | 1,200.00 |

### ವಾರ್ತಾ ಪೋಷಕರು / ಮಹಾ ಪೋಷಕರು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಟ್ರಸ್ಟ್(ರಿ) | ಬೆಂಗಳೂರು | 9175 | 1,000.00 |

### ಹಾಸ್ಟೆಲ್ ಅನ್ನದಾನ ನಿಧಿ / ಸೇವಾ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ. ಎಸ್. ಶ್ರೀನಿವಾಸರಾವ್ | ಬೆಂಗಳೂರು | 9173 | 4,000.00 |
| | | | (ತಂದೆಯ ನೆನಪು) |
| ಬಿ. ಎಸ್. ಶ್ರೀನಿವಾಸರಾವ್ | ಬೆಂಗಳೂರು | 9174 | 4,000.00 |
| | | | (ತಾಯಿಯ ನೆನಪು) |

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಶಶಿಕಲಾ | ಬೆಂಗಳೂರು | 9176 | 400.00 (ಪತಿಯ ನೆನಪು) |
| ವೇದಾವತಿರಾಮಸ್ವಾಮಿ | ಬೆಂಗಳೂರು | 9187 | 4000.00 (ತಾಯಿಯ ನೆನಪು) |
| ವೇದಾವತಿರಾಮಸ್ವಾಮಿ | ಬೆಂಗಳೂರು | 9188 | 400.00 (ತಾಯಿಯ ನೆನಪು) |
| ಅನಸೂಯರಾವ್ | ಬೆಂಗಳೂರು | 9189 | 4,000.00 (ಪತಿಯ ನೆನಪು) |
| ಅನಸೂಯರಾವ್ | ಬೆಂಗಳೂರು | 9190 | 400.00 (ಪತಿಯ ನೆನಪು) |

## ಸಾಮಾನ್ಯ ವಿದ್ಯಾರ್ಥಿ ವೇತನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ದ್ವಾರಕಾನಾಥ ಬಿ. ಆರ್. | ಬೆಂಗಳೂರು | 9191 | 1,20,000.00 (ಮಗನ ನೆನಪಿನಲ್ಲಿ) |

## ವೃದ್ಧಾಶ್ರಮ ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ.ಎಸ್.ಸಿ. ರಾವ್ | ಬೆಂಗಳೂರು | 9180 | 1,00,001.00 (ತಂದೆಯ 100ನೇ ಹುಟ್ಟುಹಬ್ಬದ ನೆನಪು) |
| ಆರ್. ಶ್ರೀನಿವಾಸನ್ | ಬೆಂಗಳೂರು | 9186 | 10,000.00 (ತಾಯಿಯ ನೆನಪಿನಲ್ಲಿ) |

## ಜನವರಿ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.01.09 ಯುಎಸ್ಎ | ಡಾ|| ಸುಬ್ಬರಾವ್ ಎಸ್.ಸಿ. | ತಂದೆ ಸಾಹುಕಾರ್ ಎಸ್ ಸಿ ಚೆನ್ನಪ್ಪಯ್ಯ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.01.09 ಬೆಂಗಳೂರು | ರಾಮಸ್ವಾಮಯ್ಯ ಹೆಚ್.ಎಸ್. | ತಂದೆ ಶಾನುಭೋಗ್ ಸುಬ್ಬರಾಯ |
| 02.01.09 ಬೆಂಗಳೂರು | ಚಂದ್ರಶೇಖರ್ ಎಸ್.ಎನ್. | ತಂದೆ ನಾರಾಯಣ ಸ್ವಾಮಿ |
| 02.01.09 ಬೆಂಗಳೂರು | ಕೇಶವಮೂರ್ತಿ ಬಿ. ಆರ್. | ತಂದೆ |
| 02.01.09 ಬೆಂಗಳೂರು | ಸಾವಿತ್ರಿ ವಿಶ್ವನಾಥ್ | ಶ್ರೀಮತಿ ಪುಟ್ಟಮ್ಮ (ಪಿರಿಯಾಪಟ್ಟಣ) |
| 03.01.09 ಬಾಂಬೆ | ಡಾ|| ಶಾಮಸುಂದರ್ ಆರ್.ಕೆ. | ತಾಯಿ ವಿಶಾಲಾಕ್ಷೀ ಆನಂದರಾಮಯ್ಯ |
| 08.01.09 ಯುಎಸ್ಎ | ವೈದೇಹಿ ಶಿವಶಂಕರ್ | ಮಗ ರಾಮ ಶಿವಶಂಕರ್ |
| 11.01.09 ಬೆಂಗಳೂರು | ಲಲಿತಮ್ಮ ಕಾಲಭೈರವನ್ | ಎಸ್.ಎನ್ ಕಾಲಭೈರವನ್ ರವರ ಹುಟ್ಟುಹಬ್ಬ |
| 12.01.09 ಬೆಂಗಳೂರು | ಶಶಿಕಲಾ | ಪತಿ ಬಿ. ಎಸ್. ರಘು |
| 12.01.09 ಬಾಂಬೆ | ವೈದ್ಯನಾಥ ಆರ್.ಜಿ. | ತಂದೆ ಆರ್ ಎಸ್ ಗುಂಡು ರಾಮಯ್ಯ |
| 14.01.09 ಯುಎಸ್ಎ | ಕು|| ಚಂದ್ರಿಕಾ | ಆರ್.ಕೆ.ಶ್ರೀಕಂಠನ್ ರವರ ಹುಟ್ಟುಹಬ್ಬ |
| 14.01.09 ಮೈಸೂರು | ಬೆಟ್ಟದಪುರ ಸಂಕೇತಿ ಮಂಗಳ ಕಾರ್ಯ ಸಮಿತಿ | |
| 14.01.09 ಮೈಸೂರು | ಬಾಲಸುಬ್ರಹ್ಮಣ್ಯ ಎಸ್. | ಪತ್ನಿ ಪದ್ಮಿನಿ |
| 15.01.09 ಮುಂಬಯಿ | ದಿ ಬಾಂಬೆ ಸಂಕೇತಿ ಭಗಿನೀ ಸಮಾಜ | |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 16.01.09 ಬೆಂಗಳೂರು | ಆರ್. ಶ್ರೀನಿವಾಸನ್ | ತಾಯಿ ಲಕ್ಷ್ಮೀದೇವಮ್ಮ |
| 17.01.09 ಬೆಂಗಳೂರು | ರಮೇಶ್ ಹೆಚ್.ಎಸ್. | ತಂದೆ ಹೆಚ್. ಎಸ್. ಸೂರ್ಯ ನಾರಾಯಣ |
| 18.01.09 ಬೆಂಗಳೂರು | ಲೆ. ಕರ್ನಲ್ ಬಿ.ವಿ.ಎಸ್. ರಾವ್ | ಮಲ್ಲಿಕಾರಾವ್‌ರವರ ಹುಟ್ಟುಹಬ್ಬ |
| 18.01.09 ನವದೆಹಲಿ | ರಾಮಸ್ವಾಮಿ ಬಿ. ಎಸ್. | ತಂದೆ ಸೂರ್ಯನಾರಾಯಣ ಬಿ. ಎಸ್. |
| 19.01.09 ಬೆಂಗಳೂರು | ದೀಪಕ್ ಬಾಲಗಂಗಾಧರ | ತಂದೆ ಬಾಲಗಂಗಾಧರ |
| 20.01.09 ಬೆಂಗಳೂರು | ಹೆಚ್. ವಿ. ಮಾಯಾ | |
| 20.01.09 ಬೆಂಗಳೂರು | ಇಂದಿರಾ ವೆಂಕಟರಾಮನ್ | ತಾಯಿ ರಾಜಮ್ಮ |
| 21.01.09 ಬೆಂಗಳೂರು | ರಮೇಶ್ ಬಿ. ಕೆ. | ಅಜ್ಜಿ ರುಕ್ಮಿಣಮ್ಮ |
| 21.01.09 ಬೆಂಗಳೂರು | ಪ್ರಭಾಕರ ಹೆಚ್. ಎಸ್. | ಸಹೋದರಿ ಪಾರ್ವತಮ್ಮ |
| 23.01.09 ಬೆಂಗಳೂರು | ವಿನೋದ ಎನ್. ಮೂರ್ತಿ | ಅಜ್ಜ ಅರ್ಥಶಾಸ್ತ್ರ ವಿಶಾರದ ಡಾ|| ಆರ್. ಶಾಮಾ ಶಾಸ್ತ್ರಿ |
| 23.01.09 ಬೆಂಗಳೂರು | ನಾಗರಾಜ ಬಿ. ಎನ್. | ತಾಯಿ ಪಾರ್ವತಮ್ಮ ಗುಂಜಾನರಸಿಂಹಯ್ಯ |
| 24.01.09 ಬೆಂಗಳೂರು | ವಿಜಯ, ಸುಜಯ, ಸರಸ್ವತಿ | ತಾಯಿ ಸುಂದರಮ್ಮ ರಾಜಾ ರಾವ್ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 25.01.09 ಹಾಸನ | ಸುಬ್ರಹ್ಮಣ್ಯ ಆರ್. | ತಂದೆ ರಂಗಸ್ವಾಮಿ ಆರ್.ಎಸ್. |
| 25.01.09 ಮೈಸೂರು | ಸಾವಿತ್ರಮ್ಮ | ಮಗ ಕೆ.ವಿ. ಅನಂತ ಸುಬ್ರಹ್ಮಣ್ಯ |
| 26.01.09 ಬೆಂಗಳೂರು | ಲಲಿತಾಂಬ ಬಿ.ಜಿ. | ಅವರ ಹುಟ್ಟುಹಬ್ಬ |
| 26.01.09 ಬೆಂಗಳೂರು | ಸುಬ್ರಹ್ಮಣ್ಯ ಆರ್.ಜಿ. | ತಂದೆ ಆರ್. ಗೋಪಾಲಯ್ಯ |
| 27.01.09 ಯುಎಸ್‌ಎ | ರಾಮನಾಥ್ ಆರ್.ವಿ. | ತಂದೆ ಜಸ್ಟೀಸ್ ಆರ್. ವೆಂಕಟರಾಮಯ್ಯ |
| 27.01.09 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ತಂದೆ ವೆಂಕಟರಾಮಯ್ಯ |
| 28.01.09 ಮೈಸೂರು | ನಾಗಮ್ಮ ಧ್ರುವ, ಸುಬ್ರಹ್ಮಣ್ಯ, ರಾಮನಾಥ್, ನಾಗರಾಜ್, ಶ್ರೀನಿವಾಸ್ | ತಂದೆ ಎಂ.ಎಸ್. ವೆಂಕಟರಾಮಯ್ಯ |
| 28.01.09 ಬಾಂಬೆ | ಜಗದೀಶ್ ಆರ್. ಕೆ. | ತಾಯಿ ಆರ್.ಕೆ.ಸಾವಿತ್ರಮ್ಮ |
| 28.01.09 ಬೆಂಗಳೂರು | ಎಸ್.ಎ.ಶ್ರೀಕಂಠಯ್ಯನವರ ಮಕ್ಕಳು | ತಂದೆ ಎಸ್.ಎ.ಶ್ರೀಕಂಠಯ್ಯ |
| 28.01.09 ಬೆಂಗಳೂರು | ಪ್ರಭಾಕರ ಹೆಚ್.ಎಸ್. | ಭಾಮೈದ ಹೆಚ್.ಎಸ್. ಅನಂತರಾಮಯ್ಯ |
| 28.01.09 ಬೆಂಗಳೂರು | ಮೀನಾಕ್ಷಮ್ಮ ಶ್ರೀಕಂಠಯ್ಯ | ಪತಿ ಎಸ್.ಎ.ಶ್ರೀಕಂಠಯ್ಯ |
| 31.01.09 ಬೆಂಗಳೂರು | ಸೂರ್ಯನಾರಾಯಣ ಆರ್.ಕೆ. | ಮಗಳು ಮೈಥಿಲಿ ಶಿವರಾಂ ಹುಟ್ಟುಹಬ್ಬ |
| 31.01.09 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಪುಟ್ಟಮ್ಮ (ಸೋದರತ್ತೆ) |

## ಶ್ರದ್ಧಾಂಜಲಿ

| | |
|---|---|
| 21.01.09 | **ಭಾಗೀರಥಿ, 53 ವರ್ಷ, ಭಾರದ್ವಾಜ ಗೋತ್ರ** |
| ಬೆಂಗಳೂರು | (ಶ್ರೀ ಆರ್. ಎಸ್. ನಾಗೇಶರವರ ಧರ್ಮಪತ್ನಿ) |
| 29.01.09 | **ಎಸ್. ಎಸ್. ಮಾರ್ಕಂಡೇಯ, 86 ವರ್ಷ, ಆತ್ರೇಯಸ ಗೋತ್ರ** |
| ಸಾಲಿಗ್ರಾಮ | (ದಿ॥ ಪೇಟೆ ಶ್ರೀಕಂಠಯ್ಯ, ಸಾಲಿಗ್ರಾಮ ಇವರ ಪುತ್ರ) |
| 04.02.09 | **ತಂಗಚ್ಚಮ್ಮ, 87 ವರ್ಷ, ವಾಧೂಲಸ ಗೋತ್ರ** |
| ಚೆನ್ನೈ | (ದಿ॥ ಆವರ್ತಿ ಶ್ರೀಕಂಠಯ್ಯನವರ ಧರ್ಮಪತ್ನಿ) |

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

## *Change of Address*

**Suryanarayana. B. S.**
**(Suri Meshtru)**

**Vimala. B. S., Srinivasa. B. S., Roopa. B. S.**

No. 211, 4th Main, 3rd Cross, Avalahalli,
BDA Layout, Girinagar 1st Phase, BSK 3rd Stage,
Bangalore - 560 085
Ph : 9886138769

## ವೃದ್ಧಾಶ್ರಮಕ್ಕೆ ಸೇರಬಯಸುವವರಿಗಾಗಿ

**ಸದ್ಯದಲ್ಲಿಯೇ ಪ್ರಾರಂಭವಾಗಲಿರುವ ಸಂಘದ ವೃದ್ಧಾಶ್ರಮದಲ್ಲಿ ವಾಸಿಸ ಬಯಸುವವರು ಸ್ವವಿವರಗಳೊಂದಿಗೆ ಸಂಘದ ಅಧ್ಯಕ್ಷರನ್ನು ಸಂಪರ್ಕಿಸಲು ಕೋರಲಾಗಿದೆ. ರೂಪು-ರೇಷೆಗಳನ್ನು ಶ್ರೀಘ್ರದಲ್ಲಿಯೇ ವಿವರಿಸಲಾಗುವುದು.**





## ಪ್ರತಿಭೆ

**ಚಿ॥ ವಿನಾಯಕ ಆತ್ರೇಯ**

**3ನೇ ತರಗತಿ**

**10ನೇ ಅಂತರರಾಷ್ಟ್ರೀಯ ವಿಜ್ಞಾನ ಪ್ರತಿಭಾ ಪರೀಕ್ಷೆಯನ್ನು ಚಿತ್ರದುರ್ಗ ಜಿಲ್ಲೆಯವರು ಭದ್ರಾವತಿಯಲ್ಲಿ ಜಿಲ್ಲಾ ಮಟ್ಟದಲ್ಲಿ ನಡೆಸಿದರು. ಆ ಪರೀಕ್ಷೆಯಲ್ಲಿ ಚಿ॥ಯು 2ನೇ ರ್‍ಯಾಂಕ್ ಪಡೆದು ಚಿನ್ನದ ಪದಕವನ್ನು ಪಡೆದಿರುತ್ತಾನೆ.**

| | | |
|---|---|---|
| ತಂದೆ | : | ಬಿ. ಎಸ್. ರವಿಶಂಕರ್ |
| ತಾಯಿ | : | ಸುಮ |
| ಅಜ್ಜಂದಿರು | : | ಬಿ. ಎಸ್. ನಾರಾಯಣ ಸ್ವಾಮಿ ಮತ್ತು ಬಿ. ವಿ. ಶ್ರೀಕಂಠ್ |
| ಅಜ್ಜಿಯರು | : | ಆರ್. ವಿ. ವಸಂತಲಕ್ಷ್ಮೀ ಮತ್ತು ವೇದಾವತಿ |

**ಚಿ॥ಗೆ ಸಂಘದ ಅಭಿನಂದನೆಗಳು**

## ಸುದ್ದಿ

**ತಾ॥ 15.02.2009ರಂದು ವಾಸ್ಕೊ (ಗೋವಾ)ದಲ್ಲಿ ಕರ್ನಾಟಕ ಸಂಘ, ವಾಸ್ಕೊ ಮತ್ತು ಕರ್ನಾಟಕ ಜಾಗೃತಿ ವೇದಿಕೆ, ಬೆಂಗಳೂರು ಇವುಗಳ ವತಿಯಿಂದ ಜರುಗಿದ 3ನೇ ಕನ್ನಡಿಗರ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನದಲ್ಲಿ ನಮ್ಮ ಬಾಂಧವರೇ ಆದ ಶ್ರೀಯುತ ಬೇ. ಗೋ. ರಮೇಶ್ ಸಮ್ಮೇಳನಾಧ್ಯಕ್ಷರಾಗಿ ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಅದೇ ದಿನ ಮಧ್ಯಾಹ್ನ 4 ಗಂಟೆಗೆ ಇವರೊಂದಿಗೆ ಸಂವಾದ ಕಾರ್ಯಕ್ರಮವೂ ಕೂಡ ಜರುಗಿತು.**

## ಶ್ರೀ ಪುರಂದರ ಮತ್ತು ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ ವರದಿ

### ಬೆಂಗಳೂರು ಶಾಖೆಯಿಂದ

ಶ್ರೀ ಪುರಂದರ ಮತ್ತು ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವವನ್ನು ದಿನಾಂಕ **01.02.2009**ರ ಭಾನುವಾರ ಬೆಳಿಗ್ಗೆ **11** ಗಂಟೆಗೆ ಶ್ರೀ ಜಯರಾಮ ಸೇವಾ ಮಂಡಳಿ, ಜಯನಗರ, ಬೆಂಗಳೂರು – **82**ರಲ್ಲಿ ಆಚರಿಸಲಾಯಿತು.

ಈ ಸಮಾರಂಭಕ್ಕೆ ಸುಮಾರು **300** ಜನ ನಮ್ಮ ಸಂಕೇತಿ ಬಾಂಧವರು ಸಂಗೀತ ಅಭಿಮಾನಿಗಳು ಸೇರಿದ್ದರು.

ಈ ಕಾರ್ಯಕ್ರಮದ ನೇತೃತ್ವವನ್ನು ನಮ್ಮ ಬಂಧುಗಳು ಮತ್ತು ದೇಶ ಖ್ಯಾತಿಯ ವಿದ್ವಾಂಸರು ಆದ ಸಂಗೀತ ವಿದ್ವಾನ್ ಕಲಾನಿಧಿ ಶ್ರೀ ಆರ್. ಕೆ. ಪದ್ಮನಾಭ ಅವರು ವಹಿಸಿದ್ದರು. ಕಾರ್ಯಕ್ರಮ ಶ್ರೀ ಎಸ್. ಸಿ. ಚಂದ್ರಶೇಖರ್‌ರವರ ವೇದಘೋಷ, ಶ್ರೀ ವಿವೇಕ ಚಂದ್ರರವರ ಪ್ರಾರ್ಥನೆ ನಂತರ ಶಾಖೆಯ ಅಧ್ಯಕ್ಷರಾದ ಶ್ರೀ ಆರ್. ಎಸ್. ಶ್ರೀನಿವಾಸಯ್ಯನವರ ಸ್ವಾಗತ ಭಾಷಣದಿಂದ ಪ್ರಾರಂಭವಾಯಿತು.

ಜ್ಯೋತಿ ಬೆಳಗಿಸಿದ ಶ್ರೀ ಆರ್. ಕೆ. ಪದ್ಮನಾಭರವರು ಶ್ರೀ ಪುರಂದರ ಮತ್ತು ಶ್ರೀ ತ್ಯಾಗರಾಜರ ಬಗ್ಗೆ ಸಂಗೀತ ಕಲಾ ಬಂಧುಗಳಿಗೆ ಎರಡು ಮಾತು ಹೇಳಿದರು.

ಗೋಷ್ಠಿ ಗಾಯನ, ಶ್ರೀ ತ್ಯಾಗರಾಜರವರುಗಳ ಕೀರ್ತನೆ ಎಲ್ಲವೂ ಸವಿಸ್ತಾರವಾಗಿ ಹಾಡಿ ಕಾರ್ಯಕ್ರಮ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಕೇಂದ್ರ ಶಾಖೆಯ ಅಧ್ಯಕ್ಷರಾದ ಶ್ರೀ ಎಂ. ನರಸಿಂಹನ್‌ರವರಿಂದ ಶ್ರೀ ಆರ್. ಕೆ. ಪದ್ಮನಾಭರವರಿಗೆ ಮಾಲಾರ್ಪಣೆ ಮಾಡಿ ಶಾಲು ಹೊದಿಸಿ ಫಲಪುಷ್ಪ ಅರ್ಪಿಸಿ ಸನ್ಮಾನ ಮಾಡಲಾಯಿತು. ವಂದನಾರ್ಪಣೆಯ ಕಾರ್ಯಕ್ರಮ ಶಾಖೆಯ ಸದಸ್ಯರಾದ ಶ್ರೀ ಎಸ್.ಸಿ. ಮಂಜುನಾಥರವರಿಂದ ನಡೆಯಿತು. ನಂತರ ಮಹಾ ಮಂಗಳಾರತಿಯು ನಡೆಯಿತು. ಎಲ್ಲರಿಗೂ ಭೋಜನದ ವ್ಯವಸ್ಥೆ ಏರ್ಪಡಿಸಲಾಗಿತ್ತು. ಅಂದಿನ ಭೋಜನ ವ್ಯವಸ್ಥೆಯನ್ನು ಶ್ರೀಮತಿ ತೇಜಸ್ವಿನಿ ಅನಂತ ಕುಮಾರ್ ಶ್ರೀ ಅನಂತ ಕುಮಾರ್ ಅವರ ಧರ್ಮಪತ್ನಿ, ಸಂಸತ್ ಸದಸ್ಯರು ವಹಿಸಿಕೊಂಡಿದ್ದರು. ಶಾಖೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಹೆಚ್. ವಿ. ಚಂದ್ರಶೇಖರ್‌ರವರು ಭೋಜನ ವ್ಯವಸ್ಥೆಯ ಏರ್ಪಾಡಿಗೆ ಮಧ್ಯಸ್ಥಿಕೆ ವಹಿಸಿ ಮುಕ್ತ ಮನಸ್ಸಿನಿಂದ ಕಾರ್ಯನಿರ್ವಹಿಸಿದ್ದರು. ಇವರಿಗೆ ಸಂಘದ ಪರವಾಗಿ ವಂದನೆಗಳು. ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು, ತನು, ಮನ, ಧನ ಎಲ್ಲದರಲ್ಲಿಯೂ ಸಹಕರಿಸಿದ ನಮ್ಮ ಎಲ್ಲಾ ಸಂಕೇತಿ ಬಾಂಧವರಿಗೂ ವಂದನೆಗಳು.





ಕಾರ್ಯಕ್ರಮದ ನಿರೂಪಣೆ ಮಾಡಿದ ಶ್ರೀ ಶೇಷಾದ್ರಿ ಶೇಖರ್‌ರವರಿಗೂ ಬೆಂಗಳೂರು ಶಾಖೆಯ ಪರವಾಗಿ ವಂದನೆಗಳು.

ಆರಾಧನಾ ಮಹೋತ್ಸವ ನಡೆಸಲು ಸಹಕರಿಸಿದ ಕೇಂದ್ರ ಶಾಖೆಯ ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೂ ಶಾಖೆಯ ಕಾರ್ಯಕಾರಿ ಸಮಿತಿಯ ಸದಸ್ಯರಿಗೂ ಸಂಘದ ವಂದನೆಗಳು.

| | |
|---|---|
| ಶ್ರೀ ಆರ್. ಎಸ್. ಶ್ರೀನಿವಾಸಯ್ಯ | ಶ್ರೀ ಬಿ.ಆರ್. ನರಸಿಂಹ ಮೂರ್ತಿ |
| ಗೌ॥ ಅಧ್ಯಕ್ಷರು | ಗೌ॥ ಕಾರ್ಯದರ್ಶಿ |
| | ದೂ : **26711031** |

## ತ್ಯಾಗರಾಜ ಆರಾಧನೆ

ಪದ್ಮಶ್ರೀ ದಿ॥ ಟಿ. ಆರ್. ಮಹಾಲಿಂಗಂ, ಸಂಗೀತ ವಿದ್ಯಾ ಸಂಸ್ಥೆ ತನ್ನ **15**ನೇ ವರ್ಷದ ತ್ಯಾಗರಾಜ ಆರಾಧನೆಯನ್ನು ತಾ॥ **25.01.09**ರಂದು ಬೆಂಗಳೂರಿನ ಮರಡಿ ಸುಬ್ಬಯ್ಯ ಟ್ರಸ್ಟ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿತ್ತು. ಇದರ ಅಧ್ಯಕ್ಷರು ಕರ್ನಾಟಕ ಕಲಾಶ್ರೀ, ಸಂಗೀತ ವಿದ್ವಾನ್ ಎಂ. ಟಿ. ಸೆಲ್ವನಾರಾಯಣ ಅವರು.

ಈ ಸಂಸ್ಥೆಯ ಸಂಸ್ಥಾಪಕರು ನಮ್ಮ ಬಾಂಧವರೇ ಆದ ವಿದ್ವಾನ್ ಬಿ. ಜಿ. ಶ್ರೀನಿವಾಸ್ (ಪಾಪು) ಅವರು.

## ತಿದ್ದುಪಡಿ

ಜನವರಿ **2009**ರ ಸಂಚಿಕೆಯ ಪುಟ 7ರಲ್ಲಿ ಶ್ರೀ ಪುರಂದರ ಮತ್ತು ತ್ಯಾಗರಾಜ ಆರಾಧನೆಯ ನೇತೃತ್ವವನ್ನು ಸಂಗೀತ ಕಲಾನಿಧಿ ಶ್ರೀ ಆರ್. ಕೆ. ಪದ್ಮನಾಭ ಅವರು ವಹಿಸುತ್ತಾರೆ ಎಂದು ಪ್ರಕಟಿಸಲಾಗಿತ್ತು. ಸಂಗೀತ ಕಲಾನಿಧಿ ಬದಲು ''ಗಾನಕಲಾ ಭೂಷಣ'' ಎಂದು ಮುದ್ರಿತವಾಗಬೇಕಿತ್ತು.

ಇದನ್ನು ದೋಷವೆಂದು ಪರಿಗಣಿಸದೆ, ಆಶಯವೆಂದು ಪರಿಗಣಿಸಬೇಕಾಗಿ ವಿನಂತಿ.

## ಡಾ|| ವಿಜಯಲಕ್ಷ್ಮಿ - ಕಿರು ಪರಿಚಯ

ದಿವಂಗತ ಶ್ರೀಮತಿ ಜಯಲಕ್ಷ್ಮಿ ಮತ್ತು ಶ್ರೀ ಹರವೆ ಲಕ್ಷ್ಮೀನರಸಿಂಹಯ್ಯ ಅವರ ಪುತ್ರ ಡಾ|| ಸುರೇಶ್ ಹರವೆ ಮೂಳೆ ಶಸ್ತ್ರಚಿಕಿತ್ಸಾ ತಜ್ಞರು ಬೆಂಗಳೂರು ಇವರ ಪತ್ನಿ ಡಾ|| ವಿಜಯಲಕ್ಷ್ಮಿ ಈಶ್ವರಪ್ಪಾ ಬಾಳೇಕುಂದ್ರಿ, 1950 ಆಗಸ್ಟ್ 06 ರಂದು ಬೆಳಗಾವಿಯಲ್ಲಿ ಜನಿಸಿದರು. ಕನ್ನಡ ನಾಡಿನ ಅಭಿಮಾನದ ಅಪೂರ್ವ ಅಭಿಜಾತ ಕುವರಿ, ಸಾಧನೆಗಳ ಸರಣಿಯನ್ನು ಧ್ವನಿಸುವ ಇವರ ಹೆಸರು ಅನ್ವರ್ಥವಾಗಿದೆ. 1967ರಲ್ಲಿ R.L. Science Institute ನ ಬಹುಮುಖ ಪ್ರತಿಭೆಯ ಅತ್ಯುತ್ತಮ ವಿದ್ಯಾರ್ಥಿನಿ ಎಂಬ ಪಾರಿತೋಷಕ ಪಡೆದ, ಇವರ ವಿದ್ಯಾರ್ಥಿ ಜೀವನ ವಿಜಯಗಳ ಸರಮಾಲೆಯಾಗಿದೆ, 1968ರಲ್ಲಿ ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿಯಲ್ಲಿ ಸೇರ್ಪಡೆಗೊಂಡರು. 1977ರಲ್ಲಿ ಬೆಂಗಳೂರು



ವಿಶ್ವವಿದ್ಯಾಲಯದ ಎಂ. ಡಿ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾಗಿ ಡಾ|| ಶಡಾಕ್ಷರಪ್ಪ ಚಿನ್ನದ ಪದಕ ಗಳಿಸಿದರು. ಸಾಧಕರ ಸಾಧನೆಯಲ್ಲಿ ''ಚಿನ್ನದ ರಾಣಿ'' ಎಂದು ಪರಿಚಯಿಸಲ್ಪಟ್ಟ ಇವರು ಇಲ್ಲಿಯವರೆಗೆ ಒಟ್ಟು 15 ಚಿನ್ನದ ಪದಕಗಳನ್ನು, ಒಂದು ರಜತ ಪದಕ ಗಿಟ್ಟಿಸಿದ್ದಾರೆ. ಡಾ|| ವಿಜಯಲಕ್ಷ್ಮಿ ಕರ್ನಾಟಕದ ಪ್ರಪ್ರಥಮ ಮಹಿಳಾ ಹೃದ್ರೋಗ ತಜ್ಞೆ. ಕರ್ನಾಟಕದಲ್ಲಿ ಮಕ್ಕಳ ಹೃದ್ರೋಗ ಚಿಕಿತ್ಸಾ ಕೇಂದ್ರವನ್ನು ಪ್ರಥಮವಾಗಿ ಸ್ಥಾಪಿಸಿದ ಹೆಗ್ಗಳಿಕೆ ಇವರದು. ಕಾರ್ಡಿಯೊಲೊಜಿಕಲ್ ಸೊಸೈಟಿಯ ಪ್ರಥಮ ಮಹಿಳಾ ಅಧ್ಯಕ್ಷೆ ಕರ್ನಾಟಕದಲ್ಲಿ ಪ್ರಥಮವಾಗಿ ಹೃದಯದ ರಂಧ್ರವನ್ನು ಶಸ್ತ್ರಚಿಕಿತ್ಸೆ ಇಲ್ಲದೇ Amplatzer Device ನಿಂದ ಮುಚ್ಚಿದ ಖ್ಯಾತಿ ಇವರದು. ಅಷ್ಟೇ ಅಲ್ಲ ಇಡೀ ಜಗತ್ತಿನಲ್ಲಿಯೇ





ಪ್ರಪ್ರಥಮವಾಗಿ ಮೂರು ವಿವಿಧ ಅತೀ ವಿರಳವೆನ್ನಿಸಿದ ಹೃದಯದ ಕಾಯಿಲೆಗಳನ್ನು Device ನಿಂದ ಮುಚ್ಚಿ ಅದನ್ನು ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ ಮಂಡಿಸಿ, ಪ್ರಕಟಿಸಿದ ಖ್ಯಾತಿ ಇವರದು. 'ಪ್ರಥಮಗಳ ಸರಮಾಲೆಯ ಸರದಾಣಿ' ಎಂದು ಪರಿಚಯದಲ್ಲಿ ಬಿರುದು ಪಡೆದ ಇವರು ಸತತವಾಗಿ ಎರಡು World Congress ಗಳಲ್ಲಿ ಮಂಡಿಸಿದ research paperಗೆ 'Best paper award' ನ್ನು ತಮ್ಮದಾಗಿಸಿಕೊಂಡ ಹೆಮ್ಮೆಯ ಭಾರತೀಯರು.

ಡಾ|| ಜಿ. ಎಸ್. ಸೇನಾನಿ ಮತ್ತು ಡಾ|| ಕೆ. ಕೆ. ದಾತೆ (oration at national CSI conference) ಉಪನ್ಯಾಸ ಕೊಟ್ಟ ಪ್ರಥಮ ಮತ್ತು ಏಕೈಕ ಕನ್ನಡಿಗರು. ಇಲ್ಲಿಯವರೆಗೆ ಒಟ್ಟು 11 oration ಕೊಟ್ಟಿದ್ದಾರೆ. ಡಾ|| ಎಚ್. ನರಸಿಂಹಯ್ಯನವರ annual science forum festival ನಲ್ಲಿ ಸತತ ನಾಲ್ಕು ಬಾರಿ ಕನ್ನಡದಲ್ಲಿ ವೈಜ್ಞಾನಿಕ ಉಪನ್ಯಾಸ ನೀಡಿದ ಖ್ಯಾತಿ ಇವರದು. ಅಖಿಲ ಭಾರತ 72ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಬೀದರನಲ್ಲಿ ''ಮಹಿಳೆ ಮತ್ತು ಮಕ್ಕಳ ಆರೋಗ್ಯದ ಮೇಲೆ ಜಾಗತೀಕರಣದ ಪರಿಣಾಮ'' ಉಪನ್ಯಾಸ ನೀಡಿದ ಏಕೈಕ ಹೃದ್ರೋಗ ತಜ್ಞೆ.

1999ರಲ್ಲಿ ಅಮೇರಿಕಾದಲ್ಲಿ ಸಾರ್ವಜನಿಕ ಸನ್ಮಾನ, 2004 ಡಾ|| ಬಿ.ಸಿ. ರಾಯ್ ಅವಾರ್ಡ್, ಮತ್ತು 2005ರ ವಚನ ಪಿತಾಮಹ ಡಾ|| ಫ.ಗು.ಹಳಕಟ್ಟಿ ಪುರಸ್ಕಾರ, 2005ರಲ್ಲಿ ರೋಟರಿ ಕ್ಲಬ್ಬಿನ ವೊಕೇಷನಲ್ ಎಕ್ಸಲೆನ್ಸ್ ಅವಾರ್ಡ್, 2006ರಲ್ಲಿ ಚಾಣಕ್ಯ ಕೊಟಿಲ, ಗ್ಲೋಬಲ್ ಅವಾರ್ಡ್, Distinguished Career Award Dr. Vijaya Sreenivas Memorial Award from SASAT in October 2006, ಬಸವೇಶ್ವರ ಸಮಿತಿಯ ''ಕಾಯಕ ಶ್ರೀ ಪ್ರಶಸ್ತಿ'' 2007, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆಯ ''ಕದಳಿ ಪ್ರಶಸ್ತಿ 2007'' ಶ್ರೀಮತಿ ಸಾವಿತ್ರಮ್ಮ ದೇ. ಜವರೇಗೌಡ ಮಹಿಳಾ ವಿಶ್ವಮಾನವ ಪ್ರಶಸ್ತಿ 2007, "WCCPGC-2008 Lifetime Achievement Award for outstanding contribution in Cardiology in the World" from Her Excellency Mrs. Pratibha Devi Singh Patil, Hon'ble President of India, "WCCPGC-2008 Lifetime Achievement Award for outstanding contribution in the field of Clinical and Preventive Cardiology" from Bharat Ratna His Excellency Dr. A.P.J. Abdul Kalam (Former President of India), ಪಡೆದ ಇವರು ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾಲಯ Senate member ಆಗಿ ಸೇವೆ ಸಲ್ಲಿಸಿದ್ದಾರೆ.

ಸಂಶೋಧನೆ ಹಾಗೂ ಪ್ರಯೋಗಗಳ ಮೂಲಕ ವಿಜ್ಞಾನಕ್ಕೆ ವಿನೂತನ ಕಾಣಿಕೆ ನೀಡಿ 48ಕ್ಕೂ ಮೇಲ್ಪಟ್ಟು ವೈದ್ಯಕೀಯ ಪ್ರಕಟಣೆಗಳು ಮತ್ತು 85ಕ್ಕೂ ಹೆಚ್ಚು ಸಂಶೋಧನ ಪ್ರಬಂಧಗಳನ್ನು ಮಾಡಿಸಿ (22 ಅಂತರಾಷ್ಟ್ರೀಯ), 350 ಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದ ಇವರು, ಉತ್ತರ ಅಮೇರಿಕದ Fairview University Children's Hospital, Minneapolis, St. Mary's Hospital (Rochester), teaching hospital of Mayo Clinic Medical School, Children



Hospital Medical Centre (Boston, Massachusetts), teaching hospital of Harvard University ಯಲ್ಲಿ ವೈದ್ಯಕೀಯ ಭಾಷಣ ನೀಡಿದ ಪ್ರಥಮ ಹೆಮ್ಮೆಯ ಕರ್ನಾಟಕದ ಹೃದ್ರೋಗ ತಜ್ಞೆ. ದೇಶ ವಿದೇಶಗಳಲ್ಲಿ ತಜ್ಞರನ್ನು ಮೆಚ್ಚಿಸಿದ ಇವರು ರೇಡಿಯೊ ವೈದ್ಯೆ, ದೂರದರ್ಶನದ ಸಂದರ್ಶನಗಳ ಮುಖಾಂತರ ಸಾರ್ವಜನಿಕರಿಗೆ ಆರೋಗ್ಯ, ಅದರಲ್ಲೂ ಹೃದಯದ ಕಾಯಿಲೆಗಳನ್ನು ತಡೆಗಟ್ಟುವುದರ ಬಗ್ಗೆ ತಿಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಇಷ್ಟೇ ಅಲ್ಲ ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಕೂಡ ಕನ್ನಡದಲ್ಲಿ ಸಾರ್ವಜನಿಕ ಭಾಷಣಗಳನ್ನು ಮಾಡಿ ಜನಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇಂಡಿಯನ್ ಅಕ್ಯಾಡೆಮಿ ಆಫ್ ಎಕೊಕಾರ್ಡಿಯೊಗ್ರಫಿಯ ಅಧ್ಯಕ್ಷರು, Cardiological Society of India, ಬೆಂಗಳೂರು ಘಟಕ ಮತ್ತು ಕರ್ನಾಟಕ ಘಟಕದ ಪ್ರಥಮ ಮಹಿಳಾ ಅಧ್ಯಕ್ಷರಾದ ಇವರು ಸಮಾಜದಲ್ಲಿ ಪ್ರಚಲಿತವಾಗಿರುವ ಹಾಗೂ ಗಂಭೀರ ಸಮಸ್ಯೆಯಾಗಿ ಕಾಡ್ಗಿಚ್ಚಿನಂತೆ ಹಬ್ಬುತ್ತಿರುವ ಮದ್ಯಪಾನ ಮತ್ತು ಧೂಮಪಾನದ ದುರಭ್ಯಾಸಗಳನ್ನು ದೂರ ಮಾಡಲು ರೈಲ್ವೆ ಸ್ಟೇಷನ್, ಬಸ್ ಸ್ಟಾಂಡ್‌ಗಳಲ್ಲಿ ತಂಬಾಕು ರಹಿತ ಸಮಾಜಕ್ಕೆ ಬೆಂಬಲಿಸಿ Signature campaign





ಪ್ರಾರಂಭಿಸಿ, 10,000 ಸಹಿ ಇರುವ ಮನವಿ ಪತ್ರವನ್ನು ರಾಜ್ಯಪಾಲರಿಗೆ ಕೊಟ್ಟಿದ್ದಾರೆ. ಅದಲ್ಲದೇ ತಂಬಾಕಿನಿಂದ ಆಗುವ ಅಪಾರ ಸಾವು-ನೋವುಗಳನ್ನು ಜನರಿಗೆ ಮನಮುಟ್ಟುವಂತೆ ತಿಳಿಸಲು, ಸಿಗರೇಟಿನ ಶವಯಾತ್ರೆಯನ್ನು ವಿಧಾನಸೌಧದಿಂದ ಪ್ರಾರಂಭಿಸಿ, ಜನಸಾಮಾನ್ಯರಿಗೆ ಕಿರು ಪುಸ್ತಕ, ಕರಪತ್ರ ವಿತರಿಸಿದ್ದಾರೆ. ಇಂದು ಅದರ ಫಲವಾಗಿ ಕೇಂದ್ರ ಆರೋಗ್ಯ ಮಂತ್ರಿಗಳು ಸಾರ್ವಜನಿಕ ಸ್ಥಳದಲ್ಲಿ ತಂಬಾಕು ನಿಷೇಧ ಕಾನೂನು ತಂದಿದ್ದಾರೆ.

ವೈದ್ಯಕೀಯ ಕ್ಷೇತ್ರದಲ್ಲಿ ಚಿರಸ್ಮರಣೀಯ ಸೇವೆ ಸಲ್ಲಿಸಿದ ಇವರು ನಾಡ ನುಡಿ ನೆಲ ಮರೆತಿಲ್ಲ. ಕನ್ನಡ ದಿನ ಪತ್ರಿಕೆಗಳಿಗೆ ಅಂಕಣಕಾರಳಾಗಿ ವಿವಿಧ ವಿಷಯಗಳ ಮೇಲೆ ಅಂಕಣಗಳನ್ನು ಬರೆದಿದ್ದನ್ನು ವಾಚಕರು ತುಂಬು ಹೃದಯದಿಂದ ಶ್ಲಾಘಿಸಿದ್ದಾರೆ. ಇವರ ಅಂಕಣಗಳನ್ನು ಪುಸ್ತಕ ರೂಪದಲ್ಲಿ ''ಜೀವನ ಧಾರೆ'' ಎಂಬ ಶೀರ್ಷಿಕೆಯಲ್ಲಿ ಮುದ್ರಣಗೊಂಡಿದೆ.

ಮಕ್ಕಳಲ್ಲಿ ''ಜನನದಿಂದ ಬರುವ ಹೃದಯದ ಕಾಯಿಲೆಯ ಮೇಲೆ ವಿಜಯ'' ಮತ್ತು ''ಸಮೃದ್ಧ ಕರ್ನಾಟಕಕ್ಕೆ ಸದೃಢ'' ಎಂಬ 'ಕಿರುಪುಸ್ತಕ' ಬರೆದಿದ್ದಾರೆ. ಸಾಧುವಾಸವಾನಿ ಟ್ರಸ್ಟ್ ಮತ್ತು ಇನ್ನಿತರ ದಾನಿಗಳ ದಾನದ ಸಹಾಯದಿಂದ ನೂರಾರು ಕಡುಬಡವರ ಮಕ್ಕಳಿಗೆ ಉಚಿತವಾಗಿ ಅತ್ಯುನ್ನತ ವಿಧವಾದ ಹೃದಯದ ಚಿಕಿತ್ಸೆ ಮಾಡಿದ್ದಾರೆ. ಹೀಗೆ ಹೃದಯದ ಕಾಯಿಲೆಯಿಂದ ನರಳುತ್ತಿರುವ ಹಸು ಕಂದಮ್ಮಗಳನ್ನು ಎದೆಗೊತ್ತಿಕೊಂಡು ಕಣ್ಣೀರು ಸುರಿಸುವ ಕರುಣಾಮಯಿ ತಾಯಂದಿರ ಕಣ್ಣೀರು ಒರೆಸಿ ಸಾವಿರಾರು ಮಕ್ಕಳಿಗೆ ಶಸ್ತ್ರಚಿಕಿತ್ಸೆ ಇಲ್ಲದೆಯೇ ಎದೆಯ ಮೇಲೆ ಗಾಯವಿಲ್ಲದೇ ಅವರ ಹೃದಯದ ನ್ಯೂನತೆಯನ್ನು ಸರಿಪಡಿಸಿದ್ದಾರೆ. ಮುಂದೆ ಈ ಮಕ್ಕಳು ತಮ್ಮ ಜೀವನದಲ್ಲಿ ಮದುವೆಯಾಗಲು ಅಥವಾ ಕೆಲಸಕ್ಕೆ ಸೇರಿಕೊಳ್ಳಲು ಯಾವ ಅಡಚಣೆಯೂ ಆಗದಂತೆ ನೆಮ್ಮದಿಯ ಜೀವನ ನಡೆಸುವ ಹಾಗೆ ಗುಣಪಡಿಸುವ ಅತೀ ಆಧುನಿಕ ವಿಧಾನದಲ್ಲಿ ಇವರದು ಎತ್ತಿದ ಕೈ. ಇವರು ಇತ್ತೀಚೆಗೆ ಹುಟ್ಟಿದ ಕೇವಲ 14 ಗಂಟೆಯ 2.5ಕೆ.ಜಿ. ಮಗುವಿಗೆ ಶಸ್ತ್ರಚಿಕಿತ್ಸೆ ಇಲ್ಲದೆಯೇ ಬಲೂನು ತೂರುನಳಿಕೆಯ ಮುಖಾಂತರ ಗುಣಪಡಿಸಿ ಸಾವಿನಿಂದ ತಪ್ಪಿಸಿದ್ದಾರೆ. ಹೋದ ವರ್ಷ ಕೌಲಾಲಾಂಪುರ್ ಮಲೇಷಿಯಾದಲ್ಲಿ 7 ಕೆ.ಜಿ. ಮಗುವಿಗೆ ಶಸ್ತ್ರ ಚಿಕಿತ್ಸೆ ಇಲ್ಲದೆ ಡಿವೈಸ್ ಅಳವಡಿಸುವ ವಿಧಾನವನ್ನು live demonstration ಮಾಡಿದ ಏಕೈಕ ಮಹಿಳೆ ಮತ್ತು ಭಾರತೀಯರೆಂದು ಖ್ಯಾತಿ ಪಡೆದಿದ್ದಾರೆ.

ಜಗತ್ತಿನಲ್ಲಿ ಹೃದಯದ ಖಾಯಿಲೆ ಸರಿಪಡಿಸುವ ಅತ್ಯುನ್ನತ ಮತ್ತು ಅತ್ಯಾಧುನಿಕ ವಿಧಾನದಲ್ಲಿ ಪರಿಣಿತಳಷ್ಟೇ ಅಲ್ಲ ಕಳೆದ 33 ವರ್ಷಗಳಿಂದ ವೈದ್ಯಕೀಯ ಶಿಕ್ಷಕರಾಗಿ ಪ್ರಾಮಾಣಿಕ ವೈದ್ಯರಾಗಿ ಶ್ರಮಿಸಿದ್ದಾರೆ. ಜನ ಸಾಮಾನ್ಯರ ಕಷ್ಟಕಾರ್ಪಣ್ಯಗಳನ್ನು ಅರಿತು ಅಂತಃಸ್ಫೂರ್ತಿಯಿಂದ ದಾನಿಗಳ ಸಹಾಯದಿಂದ ಬಡವರ ಮಕ್ಕಳಿಗೆ ಉಚಿತವಾಗಿ ಅತ್ಯಂತ ಸಂಕೀರ್ಣವಾದ ಹೃದಯದ ಚಿಕಿತ್ಸೆ ಮಾಡಿದ್ದಾರೆ. ಸಮಾಜದ ಏಳಿಗೆಗಾಗಿ ಬಡಮಕ್ಕಳ ಮತ್ತು

ಮಹಿಳೆಯರ ಕಲ್ಯಾಣಕ್ಕಾಗಿ ಸದಾ ಹೋರಾಡುತ್ತಿರುವ ಇವರು ಬಹುಮುಖ ಪ್ರತಿಭೆಯ ಸದಾಚೇತನ ತುಂಬಿದ ಮಹಾನ್ ಶಕ್ತಿಯಾಗಿದ್ದಾರೆ. ನರರೆಲ್ಲ ಹರರು ಜನರೆಲ್ಲ ಶಿವರು ಎಂಬ ವಿವೇಕಾನಂದರ ವಾಣಿಯನ್ನು ಪರಿಪಾಲಿಸಿ, ಸೇವಾನಿಷ್ಠರಾಗಿ ಸಾಧನಗೈಯುತ್ತಿದ್ದಾರೆ.

ಡಾ|| ಸುರೇಶ ಮತ್ತು ಡಾ|| ವಿಜಯಲಕ್ಷ್ಮಿಯವರ ಸುಪುತ್ರಿ ಡಾ|| ಸ್ಫೂರ್ತಿ ಪತಿ ಡಾ|| ಅನೂಪ ಮತ್ತು ಮಗಳು ಕು|| ಸಿಯಾ (ಸೀತಾ) ಜೊತೆಗೆ ಇಂದೋರ (ಮಧ್ಯಪ್ರದೇಶ) ದಲ್ಲಿದ್ದಾರೆ. ಸುಪುತ್ರ ಶ್ರೀ ಶ್ರೇಯಸ್ ಸುರೇಶ ಹೆಂಡತಿ ಶ್ರೀಮತಿ ಶ್ರೇಯಾ ಜೊತೆಗೆ ಚಿಕಾಗೊ, ಅಮೇರಿಕದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ.

Dr. I. B. Vijayalakshmi
Professor of Pediatric Cardiology
Sri Jayadeva Institute of Cardiology
Bangalore
Phone : 9448494084
Res. : No. 44A, 5th Main Road,
Vijayanagar, Bangalore - 40.

## ಗಣರಾಜ್ಯೋತ್ಸವ

ತಾ|| 26.01.2009ರಂದು ಮೈಸೂರಿನ ನಮ್ಮ ಸಂಘದ ಆವರಣದಲ್ಲಿ 60ನೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಕ್ಷೇಮ ಪಾಲಕರಾದ ಶ್ರೀ ಬಿ. ಎಸ್. ಶಿವಕುಮಾರ್‌ರವರು ಧ್ವಜಾರೋಹಣ ನೆರವೇರಿಸಿದರು. ಸಂಘದ ಜಂಟೀ ಕಾರ್ಯದರ್ಶಿಗಳಾದ ಶ್ರೀ ಎಂ. ಆರ್. ಶ್ರೀಕಂಠನ್ ಅವರು ಅಧ್ಯಕ್ಷತೆಯನ್ನು ವಹಿಸಿ, ಹಾಸ್ಟೆಲ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಗಣರಾಜ್ಯೋತ್ಸವದ ಮಹತ್ವವನ್ನು ವಿವರಿಸಿದರು. ನಂತರ ಸಿಹಿ ಹಂಚಲಾಯಿತು.

## *Change of Telephone Number*

**B. S. SADASHIVA**

**Mobile : 2368 1110**





## ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಟ್ರಸ್ಟ್ (ರಿ.)

ಜನವರಿ 03, 2009ರಂದು ನಂ. 31, ಶ್ರೀ ಮಲ್ಲಿಕಾರ್ಜುನ ವೇದ ಪಾಠಶಾಲೆ, ಪಂಪಮಹಾಕವಿ ರಸ್ತೆಯಲ್ಲಿ ಬೆಳಿಗ್ಗೆ 11 ಗಂಟೆಗೆ ''ಡಾ|| ರಶ್ಮಿ ಮಂಜುನಾಥ್ ಅವರಿಂದ ಚರ್ಮದ ಸಂರಕ್ಷಣೆ ಕುರಿತು ಕೆಲವು ಸಲಹೆಗಳು'' ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಇದಲ್ಲದೆ ಸದಸ್ಯೆಯರಿಗೆ ''ಚರ್ಮ ಸಂರಕ್ಷಣೆಯ ಬಗ್ಗೆ ಕಿವಿ ಮಾತು'' ಸ್ಪರ್ಧೆ ಇತ್ತು. ಉತ್ತಮ ಕಿವಿಮಾತು ಬರೆದ 3 ಜನ ಸದಸ್ಯೆಯರಿಗೆ ಬಹುಮಾನ ನೀಡಲಾಯಿತು. ಆ ಮೂರು ಜನ ಬಹುಮಾನಿತರು ಮತ್ತು ಅವರು ಕೊಟ್ಟ ಕಿವಿ ಮಾತುಗಳು ಹೀಗಿವೆ.

1. ಕೆ. ಸುವರ್ಣ : Never use a facescrub for oily skin with pimples as the scrub damages the pimple and causes more harm to the skin and agrivates the condition
2. ವಿಜಯಮೂರ್ತಿ : ಬಾದಾಮಿ, ರೋಸ್‌ವಾಟರ್, ಯಾವುದಾದರೂ ಹಣ್ಣು, ಜೇನುತುಪ್ಪ ಇವುಗಳನ್ನು ಸೇರಿಸಿ ಕಲೆಸಿ ಮುಖಕ್ಕೆ ಹಚ್ಚಿ 10 ನಿಮಿಷ ಬಿಟ್ಟು ಮುಖ ತೊಳೆದರೆ, ಮುಖದ ಚರ್ಮ ಕಾಂತಿಯುಕ್ತವಾಗಿರುತ್ತೆ. ಈ ರೀತಿ ವಾರಕ್ಕೊಮ್ಮೆ ಮಾಡಿ.
3. ಸಾವಿತ್ರಿ ರಮೇಶ್ : Winter season - Take bath in Lukewarm water to prevent the dryness of the skin. Hot water takes away the oil content from the body.

ಅಂದಿನ ಆತಿಥೇಯರುಗಳು : ಶ್ರೀಮತಿಯರಾದ ಗೀತಾ ಮೂರ್ತಿ, ನಳಿನಿ, ಶೈಲಜ, ಪದ್ಮಪ್ರದ್ಯುಮ್ನ, ಕಾತ್ಯಾಯಿನಿ, ಗಾಯಿತ್ರಿ, ಜಯಶ್ರೀ, ಸರಸ್ವತಮ್ಮ, ಸುಜಯ, ಶಾಂತಲಾ, ಶಾಂತಾ ನಾಗರಾಜ, ಕಮಲ, ವಿಜಯ ಮೂರ್ತಿ, ಲಲಿತಮ್ಮ, ರಶ್ಮಿರೇಖಾ ಅಂದಿನ ಕಾರ್ಯಕ್ರಮಕ್ಕಾಗಿ ವೇದ ಪಾಠಶಾಲೆಯನ್ನು ನಮಗೆ ಮುಕ್ತವಾಗಿ ತೆರವು ಮಾಡಿಕೊಟ್ಟ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರಿಗೂ ಮತ್ತು ಅಂದಿನ ಆತಿಥೇಯರುಗಳಿಗೂ ಬೆಂ.ಸಂ.ಮ.ಸ.ಟ್ರಸ್ಟ್ ವಂದನೆಗಳನ್ನು ಅರ್ಪಿಸಿತು.

## ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಟ್ರಸ್ಟ್(ರಿ.)

# 10ನೇ ರಂಜನ ಮೇಳ – 2009

ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಟ್ರಸ್ಟ್(ರಿ.)ನ ಇತಿಹಾಸದ ಪುಟದಲ್ಲಿ ಜನವರಿ 11, 2009 ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದಂತಹ ದಿನ. ಜನವರಿ 11, 2009ರಂದು ಮರಾಠಾ ಹಾಸ್ಟಲ್ ಆವರಣದಲ್ಲಿ ಬೆಳಿಗ್ಗೆ 9.30ಕ್ಕೆ ಶ್ರೀಮತಿ ಸರಸ್ವತಿಮೂರ್ತಿಯವರ (ಸ್ವರಚಿತ ಕವನದ, ಸ್ವತಃ ಸಂಗೀತ ಸಂಯೋಜನೆ ಮಾಡಿದ), ಹಾಡಿನಿಂದ ಪ್ರಾರಂಭವಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ|| ಲತಾವೆಂಕಟರಾಮನ್, ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಗೀತಾ ಬಿ.ಯು. ಮತ್ತು ವಿಶೇಷ



ಆಹ್ವಾನಿತರಾಗಿ ಬಂದಿದ್ದ ಶ್ರೀ ಎಂ. ನರಸಿಂಹನ್ ಅವರುಗಳನ್ನು ಮೇಳಕ್ಕೆ ಸ್ವಾಗತಿಸುತ್ತಾ, ಬಂದಿದ್ದ ಎಲ್ಲರನ್ನೂ ಸ್ವಾಗತಿಸಿದವರು ಟ್ರಸ್ಟೀ ಶ್ರೀಮತಿ ಲೀಲಾವತಿಯವರು. ದೀಪವನ್ನು ಬೆಳಗುವುದರ ಮೂಲಕ ಮೇಳವನ್ನು ಉದ್ಘಾಟಿಸಲಾಯಿತು. 10ನೇ ರಂಜನ ಮೇಳದ ದ್ಯೋತಕವಾಗಿ 10 ದೀಪಗಳನ್ನು ಬೆಳಗಿಸಲಾಯಿತು.

''ಮುಖ್ಯ ಅತಿಥಿಗಳು ಅತ್ಯಂತ ಸರಳ, ಮೃದು ಸ್ವಭಾವದ, ಸೇವಾ ಮನೋಭಾವದ ವೈದ್ಯೆ, ಜೀವನದಲ್ಲಿ ಮತ್ತೊಬ್ಬರಿಗೆ ಅನುಕೂಲ ಮಾಡುವ ಮನೋಭಾವ, ಅನೇಕ ಸಂಸ್ಥೆಗಳಲ್ಲಿ ತಮ್ಮ ವೃತ್ತಿ ಶ್ರದ್ಧೆ ನೀಡುತ್ತಿದ್ದಾರೆ'' ಎಂದು ಡಾ|| ಲತಾ ಅವರನ್ನು ಟ್ರಸ್ಟೀ ಡಾ|| ಸ್ವರ್ಣಗೌರಿ ಅವರು ಸಭೆಗೆ ಪರಿಚಯಿಸಿದರು. ''ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಗೀತಾ. ಬಿ. ಯು. ಅವರು ಅತಿಥಿಗಳನ್ನು ಪ್ರೀತ್ಯಾದರದಿಂದ ಸತ್ಕರಿಸುವ, ಸಂಸ್ಕೃತಿಯ ಬಗ್ಗೆ ಕಾಳಜಿಯುಳ್ಳ, ಮನೆಯನ್ನು ಬಹಳ ಚೆನ್ನಾಗಿ ಓರಣಗೊಳಿಸುವ, ಜನರಿಗೆ ಸರಳ ಸಾಹಿತ್ಯದಲ್ಲಿ ಅಚ್ಚುಕಟ್ಟಾಗಿ





ವಿಷಯಗಳನ್ನು ತಿಳಿಹೇಳುವ, ಧಾರಾವಾಹಿಗಳಿಗೆ ಸಂಭಾಷಣೆ ಬರೆಯುವ, ಇವೆಲ್ಲದರ ಮಧ್ಯೆ ಮನೆಯಲ್ಲಿ ಕರ್ತವ್ಯದ ಬಗ್ಗೆ ವಿಶೇಷ ಕಾಳಜಿಯುಳ್ಳ ವ್ಯಕ್ತಿ'' ಎಂದು ಕೋಶಾಧಿಕಾರಿ ಶ್ರೀಮತಿ ಗಾಯಿತ್ರಿ ರಾವ್ ಅವರು ಶ್ರೀಮತಿ ಗೀತಾ ಬಿ. ಯು. ಅವರನ್ನೂ ಸಭೆಗೆ ಪರಿಚಯಿಸಿದರು.

ಶ್ರೀಯುತ ಎಂ. ನರಸಿಂಹನ್‌ರವರು ಬೆಟ್ಟದಪುರ ಸಂಕೇತಿ ಸಂಘದ ಅಧ್ಯಕ್ಷರಾಗಿ ಅನೇಕ ಹೊಸಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಸ್ನೇಹಜೀವಿ, ಜನಾನುರಾಗಿ ನರಸಿಂಹನ್‌ರವರಿಗೆ ನಮ್ಮ ಮಹಿಳಾ ಸಂಘದ ಮೇಲೆ ಅಭಿಮಾನ ಮತ್ತು ನಮ್ಮ ಕಾರ್ಯ ಚಟುವಟಿಕೆಗಳ ಬಗ್ಗೆ ವಿಶೇಷವಾದ ಮೆಚ್ಚುಗೆ ಇದೆ'' ಎಂದು ನಮ್ಮ ಟ್ರಸ್ಟೀ ಗೀತಾ ವೆಂಕಟೇಶ್‌ರವರು ಶ್ರೀಯುತ ಎಂ. ನರಸಿಂಹನ್‌ರವರನ್ನು ಪರಿಚಯಿಸುತ್ತಾ ಹೀಗೆ ತಿಳಿಸಿದರು.

ಈ ಮಹಿಳಾ ಸಮಾಜವು ಕಳೆದ 23 ವರ್ಷಗಳಿಂದ ಪ್ರತೀ ಎರಡು ವರ್ಷಕ್ಕೊಮ್ಮೆ ಎಂಬಂತೆ ರಂಜನ ಮೇಳವನ್ನು ನಡೆಸುತ್ತಾ ಬಂದಿದೆ. ನಮ್ಮ ಪ್ರಥಮ ರಂಜನ ಮೇಳವನ್ನು ಕೇವಲ 20 ಮಳಿಗೆಗಳಿಂದ ಪ್ರಾರಂಭಿಸಿದೆವು, ಆದರೆ ಈ ಮೇಳದಲ್ಲಿ 140 ಮಳಿಗೆಗಳನ್ನು ಹೊಂದಿದ್ದೇವೆ ಎಂಬುದು ಗಮನಿಸಬೇಕಾದ ಅಂಶ.

ಈ ಎಲ್ಲಾ ಮೇಳಕ್ಕೂ ಒಂದೊಂದು ಉದ್ದೇಶವಿರುತ್ತದೆ. ಅಂದರೆ ಅಶಕ್ತ ಮಾಸಾಶನ ನಿಧಿ, ವಿದ್ಯಾಭ್ಯಾಸ ಸಹಾಯ ನಿಧಿ ಅಂತೆಯೇ ಈ ಬಾರಿಯ ಈ ಮೇಳದ ಆದಾಯದ ಹೆಚ್ಚಿನ ಅಂಶವನ್ನು 'ವೈದ್ಯಕೀಯ ಸಹಾಯ ನಿಧಿ' ಯಾಗಿ ಮೀಸಲಿಡಬೇಕು ಎಂಬುದು ಉದ್ದೇಶ. ನಮ್ಮ ಪ್ರತೀ ಮೇಳದಲ್ಲಿಯೂ ಅಂಗವಿಕಲರು ಅಥವಾ ನ್ಯೂನತೆಯುಳ್ಳವರು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡುವವರಿಗೆ ''ಉಚಿತ ಮಳಿಗೆ'' ನೀಡುವ ಪರಿಪಾಠ ಇದೆ. ಅಂತೆಯೇ ಈ ಬಾರಿ National Association for Blind ನವರಿಗೆ, ಅಬಲಾಶ್ರಮದವರಿಗೆ 'ಬಾಲಮನೋವಿಕಾಸ ಕೇಂದ್ರ' ದವರಿಗೆ ಉಚಿತವಾಗಿ ಮಳಿಗೆಗಳನ್ನು ನೀಡಿದ್ದೇವೆ. ಈಗ 10ನೇ ರಂಜನ ಮೇಳದ ವಿಶೇಷವೆಂದರೆ 10 ಜನರಿಗೆ ಉಚಿತವಾಗಿ ಹೊಲಿಗೆ ಯಂತ್ರ ನೀಡುತ್ತಿರುವುದು, ಒಬ್ಬ ಮಹಿಳೆಗೆ ವೈದ್ಯಕೀಯ ಸಹಾಯ ನಿಧಿಯಾಗಿ 5,000 ರೂ.ಗಳನ್ನು ನೀಡುವುದು, ಮತ್ತೊಬ್ಬ ಮಹಿಳೆಗೆ ಅಶಕ್ತ ಮಾಸಾಶನವಾಗಿ ತಿಂಗಳಿಗೆ 300 ರೂ.ಗಳಂತೆ ಒಂದು ವರ್ಷ ನೀಡುವುದು. ಹೀಗೆ ಹತ್ತು-ಹಲವಾರು ಯೋಚನೆಗಳನ್ನು ಯೋಜನಾರೂಪಕ್ಕೆ ತರುತ್ತಾ ಈ ರೀತಿಯ ಯಶಸ್ವೀ ಮೇಳಗಳನ್ನು ಮಾಡುತ್ತಾ, ಈ 10ನೇ ಮೇಳಕ್ಕೆ ಕಾಲಿಟ್ಟಿದೆ. ಸಮಾಜವು ಇಷ್ಟು ಯಶಸ್ವೀ ಮೇಳಗಳನ್ನು ನಡೆಸಲು ಸಹಕರಿಸಿದ ಎಲ್ಲರನ್ನೂ ನಾವು ಯಾವಾಗಲೂ ನೆನಪಿಸಿಕೊಳ್ಳುತ್ತಾ ಅವರುಗಳಿಗೆ ಆಭಾರಿಗಳಾಗಿದ್ದೇವೆ'' ಎಂದು ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಪರಿಚಯಿಸಿದವರು ಮ್ಯಾನೇಜಿಂಗ್ ಟ್ರಸ್ಟೀ ಶ್ರೀಮತಿ ರು. ಕೃ. ಗೀತಾಮಣಿಯವರು.

ನಂತರ ಕಾರ್ಯಕ್ರಮದಂತೆ 10 ಹೊಲಿಗೆ ಯಂತ್ರಗಳನ್ನು 10 ಜನರಿಗೆ ನೀಡಲಾಯಿತು. ಹತ್ತೂ ಯಂತ್ರಗಳನ್ನು ಶ್ರೀಯುತರುಗಳಾದ ಬಿ.ಎನ್.ವಿ.ಸುಬ್ರಹ್ಮಣ್ಯ, ವರದರಾಜನ್, ಬಿ.ವಿ.ವಿ. ಸುಬ್ರಹ್ಮಣ್ಯ, ಮೋಹನ್ ಮತ್ತು ಶ್ರೀಮತಿಯರಾದ ಲಕ್ಷ್ಮೀ ಉದಯ್ ಹಾಗೂ ಸುಮಾ ಜಗದೀಶ್ ಅವರು ಪ್ರಾಯೋಜಿಸಿದ್ದರು ಎಂಬುದು ಬಹಳ ಹರ್ಷದಾಯಕವಾದ ವಿಷಯ. **11ನೇ ಹೊಲಿಗೆ ಯಂತ್ರವನ್ನು ಮುಖ್ಯ ಅತಿಥಿಯಾಗಿ ಬಂದಿದ್ದ ಡಾ|| ಲತಾ ವೆಂಕಟರಾಮನ್‌ರವರು ಪ್ರಾಯೋಜಿಸಿದ್ದರು ಎಂಬುದು ವಿಶೇಷ.**

ಸಮಾಜದ ಕಾರ್ಯ ಚಟುವಟಿಕೆಗಳಿಗೆ ವಿಶೇಷವಾದ ತಿರುವು ನೀಡಿದ ಮಾಜಿ ಕಾರ್ಯದರ್ಶಿ ಶ್ರೀಮತಿ ಸರಳಾ, ಎಲ್ಲಾ ಮೇಳದ ಜಾಹೀರಾತನ್ನೂ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ, ಹೆಚ್ಚು ಪ್ರಚಾರ ನೀಡಿದ ಸಂಕೇತಿ ಸಂಗಮ ಪತ್ರಿಕೆಯ ಸಂಪಾದಕರಾದ ಶ್ರೀಯುತ ರಾಜಾರಾವ ಮೂರ್ತಿಯವರು, ನಮ್ಮ ಅಷ್ಟೂ ರಂಜನ ಮೇಳಕ್ಕೆ ಹೃದಯಪೂರ್ವಕವಾದ ಪ್ರೋತ್ಸಾಹ ನೀಡಿ, ಆರ್ಥಿಕವಾಗಿ ಸಹಾಯ ನೀಡಿ ಭದ್ರ ಬುನಾದಿ ಹಾಕಿಕೊಡುವ ಮತ್ತು ಈ ಮೇಳದ ವಿಶೇಷವಾಗಿ ಐದು ಹೊಲಿಗೆ ಯಂತ್ರಗಳನ್ನು ಪ್ರಾಯೋಜಿಸಿ, ಟ್ರಸ್ಟ್‌ನ ಹಾದಿಯನ್ನು ಭದ್ರಗೊಳಿಸಿದ ಶ್ರೀಯುತ ಬಿ. ಎನ್. ವಿ. ಸುಬ್ರಹ್ಮಣ್ಯ ಅವರು, ನಮ್ಮ ಎಲ್ಲಾ ಕೆಲಸ ಕಾರ್ಯಗಳಲ್ಲಿಯೂ ತಮ್ಮದೇ ಆದ ರೀತಿಯಲ್ಲಿ ಸಹಾಯ ಮಾಡುತ್ತಾ ಬಂದಿರುವ, ಟ್ರಸ್ಟಿನ ಬಗ್ಗೆ ವಿಶೇಷ ಕಾಳಜಿಯುಳ್ಳ ಬೆಟ್ಟದಪುರ ಸಂಕೇತಿ ಸಂಘದ ಪರವಾಗಿ ಅಧ್ಯಕ್ಷ ಶ್ರೀಯುತ ಎಂ. ನರಸಿಂಹನ್‌ರವರು, ಶ್ರೀ ಲಕ್ಷ್ಮೀನರಸಿಂಹ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಸತೀಶ್ ಕುಮಾರ್‌ರವರು ಟ್ರಸ್ಟ್‌ನ ಏನೇ ಕಾರ್ಯಕ್ರಮವಿದ್ದರೂ ಪ್ರಿಂಟಿಂಗ್ ಅವರದ್ದೇ. ಅವರು ಮಧ್ಯಮ ವರ್ಗದವರಾದರೂ ಪ್ರತೀ ಪ್ರಿಂಟಿಂಗ್‌ನಲ್ಲಿ ಟ್ರಸ್ಟ್‌ಗೆ ಸಣ್ಣ-ಪುಟ್ಟ ರಿಯಾಯಿತಿಗಳನ್ನು ಕೊಡುತ್ತಾ ಬಂದಿದ್ದಾರೆ ಮತ್ತು ಟ್ರಸ್ಟಿನ ಬೇರೆ ಯಾವ ಕೆಲಸದಲ್ಲಾದರೂ ಅವರ ಸಹಾಯ ಇದ್ದೇ ಇರುತ್ತದೆ. ಇದನ್ನು ನೆನಪು ಮಾಡಿಕೊಳ್ಳುತ್ತಾ ಶ್ರೀ ಸತೀಶ್ ಕುಮಾರ್‌ರವರು ಮತ್ತು ಪ್ರತೀ ಮೇಳಕ್ಕೂ ಬೇಕಾಗುವ ಕಂಪ್ಯೂಟರ್ ಪ್ರಿಂಟೌಟ್‌ಗಳನ್ನು ಉಚಿತವಾಗಿ ಮಾಡಿಕೊಡುತ್ತಾ ಬಂದಿರುವ, ಟ್ರಸ್ಟಿನ ಬಗ್ಗೆ ವಿಶೇಷ ಆಸ್ಥೆ ಹೊಂದಿರುವ ಶ್ರೀಯುತ ಕೆ. ಎನ್. ಮೂರ್ತಿಯವರು, ಇವರೆಲ್ಲರನ್ನೂ ವೇದಿಕೆಗೆ ಕರೆದು, ನೆನಪಿನ ಕಾಣಿಕೆಗಳನ್ನು ನೀಡಿ, ಗೌರವಿಸಲಾಯಿತು.

ಇದೇ ನಿಟ್ಟಿನಲ್ಲಿ ವೈದ್ಯಕೀಯ ಸಹಾಯ ನಿಧಿಯಾಗಿ ಶ್ರೀಮತಿ ಜಯಶ್ರೀ ಎಂಬುವವರಿಗೆ 5,000 ರೂ.ಗಳನ್ನೂ, 82 ವರ್ಷದ ಒಬ್ಬ ಬಡ ಮಹಿಳೆಗೆ ಈ ವರ್ಷದ





ಅಶಕ್ತ ಮಾಸಾಶನವನ್ನು ನೀಡಲಾಯಿತು.

ಮೇಳಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ|| ಲತಾ ವೆಂಕಟರಾಮನ್‌ರವರು ಮಾತನಾಡುತ್ತಾ ಸಂಕೇತಿಗಳು ಸಂಗೀತದಲ್ಲಿ, ವೇದದಲ್ಲಿ ಬಹಳ ಜಾಣರೆಂದು ಪ್ರಸಿದ್ಧರಾಗಿದ್ದಾರೆ. ಆದರೆ ಇಲ್ಲಿ ನೋಡಿದರೆ ಇಷ್ಟು ಚೆನ್ನಾಗಿ ಮೇಳದ ಆಯೋಜನೆ ಮತ್ತು



ಅಷ್ಟೂ ವರ್ಷಗಳಿಂದ ಸಂಘವನ್ನು ನಡೆಸಿಕೊಂಡು ಬಂದಿರುವ ರೀತಿಯನ್ನು ಗಮನಿಸಿದರೆ ಸಂಕೇತಿ ಹೆಂಗಸರು ಸಮರ್ಥರೂ ಕೂಡ ಎನಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಗೀತಾ. ಬಿ. ಯು.ರವರು ಡುಂಡಿರಾಜ್‌ರವರ ಸಾಹಿತ್ಯದ ಚುಟುಕಗಳನ್ನು ಉದಾಹರಣೆ ಕೊಡುತ್ತಾ ಜನರನ್ನು ನಗಿಸುತ್ತಾ, ಇಲ್ಲಿ ಭಾಷಣದ ಅಗತ್ಯ ಕಮ್ಮಿ, ಏನಿದ್ದರೂ ಮಳಿಗೆಗಳಿಗೆ ಭೇಟಿ ನೀಡಿ, ಸಾಧ್ಯವಾದಷ್ಟು ವ್ಯಾಪಾರ ಮಾಡಬೇಕು. ಈ ಟ್ರಸ್ಟ್ ಮಾಡುತ್ತಿರುವ ಸಮಾಜ ಸೇವೆ, ಸಾಮಾಜಿಕ ಕಳಕಳಿ ಮೆಚ್ಚುವಂತಹುದು ಎಂದು ಚಿಕ್ಕ ಚೊಕ್ಕ ಭಾಷಣ ಮಾಡಿದರು. ವಿಶೇಷ ಆಹ್ವಾನಿತರಾಗಿ ಬಂದಿದ್ದ ಶ್ರೀಯುತ ಎಂ. ನರಸಿಂಹನ್‌ರವರು ಟ್ರಸ್ಟಿನ ಕಾರ್ಯ ಚಟುವಟಿಕೆಗಳನ್ನು ಮೆಚ್ಚುತ್ತಾ, ಕಾರ್ಯದಕ್ಷತೆಯನ್ನು ಶ್ಲಾಘಿಸುತ್ತಾ, ಈ ಟ್ರಸ್ಟಿಗೆ 80ಜಿ ಸಿಗಲಿ, ಅದರಿಂದ ಟ್ರಸ್ಟಿನ ಯೋಜನೆಗಳು ಇನ್ನೂ ವಿಸ್ತಾರವಾಗಲು ಅನುಕೂಲವಾಗುತ್ತದೆ ಮತ್ತು ನಮ್ಮ ಬೆಂಬಲ ಯಾವಾಗಲೂ ಇದೆ ಎಂದು ನುಡಿದರು.

ಟ್ರಸ್ಟಿನ ಹಿರಿಯ ಸದಸ್ಯೆಯಾದ ಶ್ರೀಮತಿ ಲೀಲಾ ಶ್ರೀಕಂಠಯ್ಯರವರು ಮುಖ್ಯ ಅತಿಥಿಗಳಿಗೆ, ಅಧ್ಯಕ್ಷರಿಗೆ, ವಿಶೇಷ ಆಹ್ವಾನಿತರಿಗೆ ಈ ಮೇಳದ ವಿಷಯವನ್ನು ಅನೇಕ ಕಡೆ ತಿಳಿಸಲು ಸಹಾಯ ಮಾಡಿದ ಬಿ. ಆರ್. ನರಸಿಂಹಮೂರ್ತಿಯವರಿಗೂ, ಮೇಳಕ್ಕೆ ಆರ್ಥಿಕ

ಸಹಾಯ ನೀಡಿದ ಸಮಸ್ತ ಬಾಂಧವರಿಗೂ, ಎಲ್ಲಾ ರೀತಿಯ ಸಲಕರಣೆಗಳನ್ನು ಒದಗಿಸಿದ ಮರಾಠಾ ಹಾಸ್ಟೆಲ್‌ನ ಮ್ಯಾನೇಜರ್ ಸುಬ್ಬರಾವ್‌ರವರಿಗೂ, ಸಾಕಷ್ಟು ಟಿಕೆಟ್ ಪುಸ್ತಕಗಳನ್ನು ಕೊಂಡು ಸಹಕರಿಸಿದ ಅಭಿಮಾನಿಗಳಿಗೂ, ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಾಯ ಮಾಡಿದ ಸಮಸ್ತ ಅಭಿಮಾನಿಗಳಿಗೂ ವಂದನೆಗಳನ್ನು ಸಲ್ಲಿಸಿದರು.

ಸಂಸ್ಕೃತಿಗೆ ಸಂಬಂಧ ಪಟ್ಟಂತೆ ಈ ಬಾರಿ ಮೇಳದಲ್ಲಿ 'ತೋರಣ ಸ್ಪರ್ಧೆ' ಇಡಲಾಗಿತ್ತು. 12.30ಕ್ಕೆ ತೋರಣ ಸ್ಪರ್ಧೆಯ ಬಹುಮಾನಗಳನ್ನು ವಿತರಿಸಲಾಯಿತು. ಪ್ರಥಮ, ದ್ವಿತೀಯ, ತೃತೀಯ ಬಹುಮಾನಗಳಲ್ಲದೆ 10 ಸಮಾಧಾನಕರ ಬಹುಮಾನಗಳನ್ನು ಆರ್ಕೆ ಫುಡ್ಸ್‌ನವರು ಪ್ರಾಯೋಜನೆ ಮಾಡಿ, ಅದರ ಮಾಲೀಕರಾದ ಶ್ರೀಮತಿ ರಂಗನಾಯಕಿಯವರೇ ಬಹುಮಾನ ವಿತರಿಸಿದರು. ಇವಿಷ್ಟೂ ಬಹುಮಾನ ಬಾರದೇ ಇರುವವರಲ್ಲಿ ಒಂದು ಲಾಟರಿ ತೆಗೆದು, ಅವರೊಬ್ಬರಿಗೆ ನಮ್ಮ ಹಿರಿಯ ಸದಸ್ಯೆ ಶ್ರೀಮತಿ ಕಾತ್ಯಾಯಿನಿ ಬಾಯಿಯವರು ಪ್ರಾಯೋಜಿಸಿ, ತಾವೇ ಬಹುಮಾನ ನೀಡಿದರು.

ಸಂಜೆ 6 ಗಂಟೆಗೆ ರ್‍ಯಾಫಲ್ ಟಿಕೆಟ್ ಡ್ರಾ ನಡೆಯಿತು. ಇದರಲ್ಲಿ 24 ಬಹುಮಾನಗಳನ್ನು ಡ್ರಾ ಮಾಡಲಾಯಿತು. ಈ 24 ಬಹುಮಾನಗಳು ಪ್ರಾಯೋಜಿತವಾಗಿದ್ದವು. ಪ್ರಾಯೋಜಕರು ಶ್ರೀಮತಿ ಲೀಲಾ. ಎಸ್, ಸತ್ಯವತಿ. ಆರ್, ಗೀತಾ. ಎಸ್, ಚೇತನ್ ಭಟ್, ಕೇಶವ ಮೂರ್ತಿ. ಎಂ ಮತ್ತು ಟಿ. ಆರ್. ರಾಮು ಅವರುಗಳು. ಕೆಲವರು ಅಲ್ಲಿಯೇ ಬಹುಮಾನ ಸ್ವೀಕರಿಸಿದರು. ಅಲ್ಲಿ ಬಾರದವರಿಗೆ ನಾವೇ ತಿಳಿಸಿ ಬಹುಮಾನ ನೀಡುವುದಾಗಿ ಮ್ಯಾ|| ಟ್ರಸ್ಟೀ ಆರ್.ಕೆ. ಗೀತಾಮಣಿ ತಿಳಿಸಿದರು. ಪ್ರಾಯೋಜಕರೆಲ್ಲರಿಗೂ ಟ್ರಸ್ಟ್ ವಂದನೆ ಅರ್ಪಿಸಿತು.

ವ್ಯಾಪಾರೀ ಮಳಿಗೆಗಳಿಂದ ಎರಡು ಅದೃಷ್ಟದ ಮಳಿಗೆಗಳ ಆಯ್ಕೆ ಮತ್ತು ತಿಂಡಿ ತಿನಿಸುಗಳಲ್ಲಿ 2 ಅದೃಷ್ಟದ ಮಳಿಗೆಗಳ ಆಯ್ಕೆ ಮಾಡಲಾಯಿತು. ಈ ಅದೃಷ್ಟದ ಮಳಿಗೆಗಳ ಬಹುಮಾನಗಳನ್ನು ಶ್ರೀ ಬಿ.ಕೆ. ಸತ್ಯನಾರಾಯಣ ಮತ್ತು ಶ್ರೀಮತಿ ಶಕುಂತಲಾ. ಜೆ. ಅವರು ಪ್ರಾಯೋಜಿಸಿ, ಅವರೇ ಬಹುಮಾನ ನೀಡಿದರು.

ಇವಿಷ್ಟೇ ಅಲ್ಲದೆ ಪ್ರತೀ ನೂರು ಪ್ರವೇಶಕ್ಕೊಮ್ಮೆ ಒಂದು ಬಹುಮಾನ, ಬೆಳಿಗ್ಗೆಯಿಂದ ಸಂಜೆಯವರೆಗೂ ನಿರಂತರ ಹೌಸೀ, ನಮ್ಮ ಮೇಳಕ್ಕೆ ಸಹಾಯ ಮಾಡಿದ ಸುಮಾರು 65





ಜನರನ್ನು ವೇದಿಕೆಗೆ ಕರೆದು ನೆನಪಿನ ಕಾಣಿಕೆಗಳನ್ನು ನೀಡುವುದು, ಇವೆಲ್ಲಾ ಚಟುವಟಿಕೆಗಳು ನಡೆಯುತ್ತಲೇ ಇತ್ತು.

ನಿಜವಾಗಿಯೂ ಮೇಳಕ್ಕೆ ಭೇಟಿಕೊಟ್ಟ ಜನರ ಸಹಕಾರಕ್ಕಾಗಿ ಟ್ರಸ್ಟ್ ಬಹಳ ಸಂತಸ ಪಟ್ಟಿದೆ. ಸುಮಾರು 4,000 ಜನ ಭೇಟಿ ನೀಡಿ, ಮೇಳದ ಬಗ್ಗೆ ಎಲ್ಲರೂ ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಾ, ಕೈಲಿ ಭಾರವಾದ ಬ್ಯಾಗ್‌ಗಳನ್ನು ಹೊರುತ್ತಾ, ಈ ಮೇಳವು ಪ್ರತೀ ವರ್ಷವೂ ನಡೆಯಲಿ ಎಂದು ಹೇಳುತ್ತಾ ತೆರಳುತ್ತಿದ್ದರು.

ಮೇಳವನ್ನು ಯಶಸ್ವಿಗೊಳಿಸಿದ ಪ್ರಾಯೋಜಕರು, ಪ್ರೋತ್ಸಾಹಿಸಿದ ಜನರು, ಉತ್ತೇಜಿಸಿದ ಬಂಧುಗಳು, ಜೊತೆಯಲ್ಲಿ ಕೆಲಸ ಮಾಡಿದ ಟ್ರಸ್ಟಿನ ಪದಾಧಿಕಾರಿಗಳು, ಸ್ವಯಂ ಸೇವಕಿಯರಾಗಿ ಕೆಲಸ ಮಾಡಿದ ಸ್ನೇಹಿತೆಯರು, ಇಷ್ಟೆಲ್ಲಾ ಕೆಲಸ ಮಾಡಲು ಸಹಕಾರ ನೀಡಿದ ತಮ್ಮ ಕುಟುಂಬದವರು ಎಲ್ಲರನ್ನೂ ನೆನಪು ಮಾಡಿಕೊಂಡು, ಹೃದಯ ತುಂಬಿಕೊಂಡರು ಮ್ಯಾ|| ಟ್ರಸ್ಟೀ ಗೀತಾಮಣಿಯವರು.

ಮೇಳಕ್ಕೆ ಜನರೇಟರನ್ನು ಶ್ರೀ ಜಾನ್‌ಸನ್‌ರವರು, ದೀಪ ಮತ್ತು ಮೈಕ್‌ಗಳನ್ನು ಶ್ರೀ ರಾಜುರವರು ಪ್ರಾಯೋಜಿಸಿದರು. ಇದಕ್ಕಾಗಿ ಬಹಳಷ್ಟು ಶ್ರಮಿಸಿದವರು ನಮ್ಮ ಬಂಧು ಶ್ರೀಯುತ ಕೃಷ್ಣಾರವರು, ಅವರ ಅಭಿಮಾನಕ್ಕಾಗಿ ಟ್ರಸ್ಟ್ ಅವರನ್ನು ವಂದಿಸುತ್ತಾ, ಮಳಿಗೆ ಇಟ್ಟು ತಮ್ಮನ್ನು ಪ್ರೋತ್ಸಾಹಿಸಿದವರಿಗಂತೂ ಬಹಳ ವಿಶೇಷವಾದ ವಂದನೆಗಳನ್ನು ತಿಳಿಸುತ್ತಾ, ಮೇಳವನ್ನು ಮುಗಿಸಲಾಯಿತು.

---

**ಸಂಪರ್ಕಿಸಿ :**

ವಧೂ-ವರರ ವಿವರಣೆಗಳಿಗಾಗಿ ನಮ್ಮ ಬಾಂಧವರು ಶ್ರೀಯುತ ಹೆಚ್.ವಿ. ಮುರಳೀಧರ ಅವರನ್ನು ಸಂಪರ್ಕಿಸಬಹುದು.

**(P. G. Accommodation Available)**

**ದೂ : 9242803829, 9341413319**

*With Best Compliments From :*

**Savithri Ramesh**

**Certified Handwriting Analyst**
**Change your personality**

*By*

**Changing your Handwriting !**
**Graphotherapy Classes**

*For*

**School Children, College Students,**
**Corporates, Housewives**
**Age No Bar**

**Contact : 9900788954, 080 - 41624114**
Email : saviramesh14@gmail.com

**Come Learn the easiest way**
**to change yourself !**

Res. : # 3973, 17th 'E' Cross, 3rd Main,
BSK 2nd Stage, Bangalore - 560 070





*With Best Compliments From :*

**OM SHREE ASSOCIATES**

Shop No. 03, Door No. 331, Nirantatra,
3rd Main Road, Ramanjaneya Nagar Layout,
Chikkallasandra Post, Bangalore - 560 061

Contact : **S. Anantha N. Sharma**
**Ph : 080 - 2639 3340, (M) 94488 00929, 99004 17599**

*With Best Wishes From :*

**INDELCON**

No. 71, Defence Colony, Indiranagar,
Bangalore - 560 038

Contact : **B. R. Dwarakanath**
**Ph : 25282781, 9880482781**

*With Best Compliments From :*

**ADITYA ASSOCIATES**

**Civil Engineer & Contractor**
No. 26, 3rd Cross, Govindappa Layout,
Near G.K.M. College, Jaraganahalli,
Bangalore - 560 078

Contact : **B. K. Harish**
**Ph : 9986025223, 26541809**